# ಅಧ್ಯಾಯ–III

# ಮಂಡಳಿಯ ಕಾರ್ಯನಿರ್ವಹಣೆ

# ಅಧ್ಯಾಯ–III

# ಮಂಡಳಿಯ ಕಾರ್ಯ ನಿರ್ವಹಣೆ

*ಪ್ರಾದೇಶಿಕ ಅಸಮಾನತೆಗಳನ್ನು ಪರಿಹರಿಸುವುದು ಮತ್ತು ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಪ್ರಮುಖ ಕಾರ್ಯಗಳನ್ನು ಮಂಡಳಿಯು ತನ್ನ ಅಸ್ತಿತ್ವದ ಒಂಬತ್ತು ವರ್ಷಗಳ ಅವಧಿಯಲ್ಲಿ ನಿರ್ವಹಿಸಿರಲಿಲ್ಲ. ಸೂಕ್ತ ಸೂಚಕಗಳನ್ನು ಉಲ್ಲೇಖಿಸಿ ವಿವಿಧ ವಲಯಗಳಲ್ಲಿನ ಅಭಿವೃದ್ಧಿಯ ಸಾಪೇಕ್ಷ ಮಟ್ಟವನ್ನು ನಿರ್ಧರಿಸುವ ನಿರ್ದಿಷ್ಟ ಕಾರ್ಯಗಳು, ಬಾಕಿ ಉಳಿದಿರುವುದನ್ನು ನಿರ್ಧರಿಸಿ ಅದನ್ನು ತೆಗೆದುಹಾಕಲು ಆಯವ್ಯಯ ಹಂಚಿಕೆಗಳನ್ನು ಸೂಚಿಸುವುದು ಮತ್ತು ಸರ್ಕಾರಕ್ಕೆ ನೀತಿ ಒಳಹರಿವುಗಳನ್ನು ಒದಗಿಸುವುದು, ಹುದ್ದೆಗಳ ರಚನೆಗೆ ಶಿಫಾರಸುಗಳನ್ನು ನೀಡುವುದು, ಸಂಸ್ಥೆಗಳ ಸ್ಥಾಪನೆ ಮುಂತಾದವುಗಳನ್ನು ಕೈಗೊಳ್ಳದಿದ್ದುದರಿಂದ 98ನೇ ಸಾಂವಿಧಾನಿಕ ತಿದ್ದುಪಡಿಯ ಗುರಿಗಳನ್ನು ಸಾಧಿಸಲಾಗಲಿಲ್ಲ.*

*ಮಂಡಳಿಗೆ ನೆರವು ನೀಡಲು ಮಂಡಳಿಯ ಆದೇಶ 2013ರಲ್ಲಿ ನಿರ್ದಿಷ್ಟಪಡಿಸಿದ್ದ ವಿವಿಧ ಉನ್ನತ ಮಟ್ಟದ ಸಮಿತಿಗಳು ಕಾರ್ಯ ನಿರ್ವಹಿಸುತ್ತಿರಲಿಲ್ಲ. ಮಂಡಳಿ ಆದೇಶ 2013ರಲ್ಲಿ ಸೂಚಿಸಲಾದ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಮಂಡಳಿಯು ಸಲಹಾ ಮಂಡಳಿಯನ್ನು ರಚಿಸಿರಲಿಲ್ಲ. ಮಂಡಳಿಯ ಮಟ್ಟದಲ್ಲಿ ಸಲಹಾ ಮಂಡಳಿಯ ಅನುಪಸ್ಥಿತಿಯು ಭವಿಷ್ಯದ ಯೋಜನೆಯನ್ನು ತಯಾರಿಸದಿರುವಲ್ಲಿ ಮತ್ತು ಪ್ರದೇಶದ ಆರ್ಥಿಕ ಸಾಮರ್ಥ್ಯದ ಮೌಲ್ಯಮಾಪನ ಮಾಡದಿರುವುದರಲ್ಲಿ ಪರಿಣಮಿಸಿತು. ಮಂಡಳಿಯ ಆದೇಶ 2013ರ ಪ್ರಕಾರ ಅನುಷ್ಠಾನ ಸಮಿತಿ, ತಜ್ಞರ ಸಮಿತಿಯನ್ನು ರಚಿಸಿರಲಿಲ್ಲವಾಗಿ ಅದು ಮಂಡಳಿಯು ಕೈಗೊಂಡ ಅಭಿವೃದ್ಧಿ ಕಾರ್ಯಗಳ ಪರಿಣಾಮಕಾರಿ ಅನುಷ್ಠಾನದ ಮೇಲೆ ಪರಿಣಾಮ ಬೀರಿತು. ತತ್ಪರಿಣಾಮವಾಗಿ ಮಂಡಳಿಯಿಂದ ಅನುಷ್ಠಾನಗೊಂಡ ಕಾಮಗಾರಿಗಳು ಅಸಾಮಾನ್ಯವಾಗಿ ವಿಳಂಬಗೊಂಡವು ಮತ್ತು ಪ್ರಾದೇಶಿಕ ಅಸಮಾನತೆಗಳ ಪರಿಹಾರದ ಉದ್ದೇಶಿತ ಗುರಿಯನ್ನು ಸಾಧಿಸಲಾಗಲಿಲ್ಲ.*

## 3.1 ಮಂಡಳಿಯ ರಚನೆ

ಸಂವಿಧಾನದ ಅನುಚ್ಛೇದ 371–ಜೆ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಜಾರಿಗೊಳಿಸಿ ಕರ್ನಾಟಕ ರಾಜ್ಯಪಾಲರು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿ (ನವೆಂಬರ್ 2013) ಮತ್ತು ಅದರ ಕಾರ್ಯಗಳನ್ನು ನಿರ್ದಿಷ್ಟಪಡಿಸಿ, ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಆದೇಶ, 2013ನ್ನು (ಮಂಡಳಿ ಆದೇಶ 2013) ಜಾರಿಗೊಳಿಸಿದರು. ಮಂಡಳಿಯ ರಚನೆಗೆ ಸಂಬಂಧಿಸಿದ ವಿಷಯಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

### *3.1.1 ಮಂಡಳಿಯ ಸದಸ್ಯರ ನೇಮಕಾತಿ ಮಾಡದಿರುವುದು*

ಮಂಡಳಿಯು ಒಟ್ಟಾರೆ ನೀತಿ ನಿರ್ಣಯಗಳನ್ನು ಮಾಡುತ್ತದೆ, ಯೋಜನೆಗಳನ್ನು ರೂಪಿಸುತ್ತದೆ, ಕಾರ್ಯತಂತ್ರವನ್ನು ರೂಪಿಸುತ್ತದೆ ಮತ್ತು ಸಂಸ್ಥೆಯೊಂದಕ್ಕೆ ಮೇಲ್ವಿಚಾರಣೆಯನ್ನು ಒದಗಿಸುತ್ತದೆ. ಮಂಡಳಿಯು ತನ್ನ ಸದಸ್ಯರ ಮೂಲಕ ಈ ಕಾರ್ಯಗಳನ್ನು ನಿರ್ವಹಿಸುತ್ತದೆ ಮತ್ತು ಮಂಡಳಿಯ ಸದಸ್ಯರ ನೇಮಕಾತಿಯು ಮಂಡಳಿಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಮುಖ್ಯವಾಗಿದೆ.

ಮಂಡಳಿಯ ಆದೇಶ 2013ರ ಕಲಂ 3(ಎ) ಪ್ರಕಾರ 28 ಸದಸ್ಯರನ್ನೊಳಗೊಂಡ ಮಂಡಳಿಯನ್ನು ರಚಿಸಬೇಕು ಮತ್ತು ಕಲ್ಯಾಣ–ಕರ್ನಾಟಕ ಪ್ರದೇಶದ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರುಗಳು ಮಂಡಳಿಯ ಸದಸ್ಯರಾಗಿರಬೇಕು. ಮಂಡಳಿಯ ಇತರ ಸದಸ್ಯರುಗಳೆಂದರೆ; ಕರ್ನಾಟಕ ವಿಧಾನಸಭೆಯ ಸದಸ್ಯರು (8), ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು (2), ಸಂಸದರು (1), ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರು (1),

ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು/ಮೇಯರ್ (1) ಮತ್ತು ರಾಜ್ಯದ ಯೋಜನಾ ಪ್ರಕ್ರಿಯೆಯಲ್ಲಿ ಪರಿಣಿತರಾದ ತಲಾ ಒಬ್ಬ ಸದಸ್ಯರು (5). ಕಲಬುರಗಿ ಕಂದಾಯ ಪ್ರದೇಶದ ಪ್ರಾದೇಶಿಕ ಆಯುಕ್ತರು (ಅಧಿಕಾರ ನಿಮಿತ್ತ ಸದಸ್ಯರು), ಯೋಜನಾ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು (ಅಧಿಕಾರ ನಿಮಿತ್ತ ಸದಸ್ಯರು) ಹಣಕಾಸು ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು (ಅಧಿಕಾರ ನಿಮಿತ್ತ ಸದಸ್ಯರು) ಮತ್ತು ಮಂಡಳಿಯ ಕಾರ್ಯದರ್ಶಿ (ಸದಸ್ಯ ಕಾರ್ಯದರ್ಶಿ), ಇವರುಗಳನ್ನೂ ಸಹ ಸರ್ಕಾರವು ನಾಮ ನಿರ್ದೇಶನ ಮಾಡಿತ್ತು. ರಾಜ್ಯ ಸರ್ಕಾರವು ಅಧ್ಯಕ್ಷರಾಗಿ ನಾಮನಿರ್ದೇಶನ ಮಾಡಬೇಕಾದ ಪ್ರದೇಶದ ಜಿಲ್ಲೆಗಳ ಉಸ್ತುವಾರಿ ಸಚಿವರಲ್ಲಿ ಒಬ್ಬರನ್ನು ರಾಜ್ಯ ಸರ್ಕಾರವು ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಬೇಕು ಮತ್ತು 2 ವರ್ಷಗಳ ಅವಧಿಗೆ ಅವರು ಅಧಿಕಾರವನ್ನು ಹೊಂದಿರುತ್ತಾರೆ. ಅಧ್ಯಕ್ಷರು ಮಂಡಳಿಯ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ. ಮಂಡಳಿಯ ಅಧ್ಯಕ್ಷರ ವಿವರಗಳು ಮತ್ತು ಅವರ ಅಧಿಕಾರಾವಧಿಯನ್ನು **ಕೋಷ್ಟಕ–3.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.1: ಮಂಡಳಿಯ ಅಧ್ಯಕ್ಷರ ವಿವರಗಳು ಮತ್ತು ಅವರ ಅಧಿಕಾರಾವಧಿ**

| ಅಧ್ಯಕ್ಷರ ಹೆಸರು | ವಿಧಾನಸಭಾ ಕ್ಷೇತ್ರ | ಅವಧಿ | |
|---|---|---|---|
| | | ಯಿಂದ | ವರೆಗೆ |
| ಶ್ರೀ ಕಮರುಲ್ ಇಸ್ಲಾಂ, ಶಾಸಕರು | ಕಲಬುರಗಿ | 27.01.2014 | 27.01.2016 |
| ಡಾ. ಶರಣ ಪ್ರಕಾಶ ಪಾಟೀಲ್, ಶಾಸಕರು | ರಾಯಚೂರು | 28.01.2016 | 22.01.2018 |
| ಶ್ರೀ ಬಸವರಾಜ ರಾಯರೆಡ್ಡಿ, ಶಾಸಕರು | ಕೊಪ್ಪಳ | 09.03.2018 | 31.03.2018 |
| ಶ್ರೀ ರಾಜಶೇಖರ ಪಾಟೀಲ, ಶಾಸಕರು | ಯಾದಗಿರಿ | 01.04.2018 | 15.05.2018 |
| ಶ್ರೀ ದತ್ತಾತ್ರೇಯ ಚಂದ್ರಶೇಖರ ಪಾಟೀಲ, ಶಾಸಕರು | ಕಲಬುರಗಿ | 03.08.2020 | ಇಲ್ಲಿಯವರೆಗೆ |

ಮಂಡಳಿಗೆ ಸದಸ್ಯರನ್ನು ಮೊದಲು ಜನವರಿ 2014ರಲ್ಲಿ ನೇಮಿಸಲಾಯಿತು ಮತ್ತು 2018–19ರವರೆಗೆ ಕಾಲಕಾಲಕ್ಕೆ ನಾಮನಿರ್ದೇಶನ ಮಾಡಲಾಯಿತು. 2019–20, 2020–21 ಮತ್ತು 2021–22ರ ಅವಧಿಯ ಮೂರು ತ್ರೈಮಾಸಿಕಗಳಲ್ಲಿ ಯಾವುದೇ ಸದಸ್ಯರನ್ನು ಮಂಡಳಿಗೆ ನೇಮಿಸಿರಲಿಲ್ಲ. 2 ವರ್ಷ 11 ತಿಂಗಳುಗಳ ಕಾಲ ಮಂಡಳಿಯ ಸದಸ್ಯರ ಹುದ್ದೆಗಳು ಖಾಲಿಯಿದ್ದು ಆ ಅವಧಿಯಲ್ಲಿ ಮಂಡಳಿಯ ಕಾರ್ಯಗಳ ನಿರ್ವಹಣೆಯ ಮೇಲೆ ಪರಿಣಾಮ ಬೀರಿತು. ರಾಜ್ಯ ಸರ್ಕಾರವು ಮಾರ್ಚ್ 2022ರಲ್ಲಿ ಸದಸ್ಯರನ್ನು ಮಂಡಳಿಗೆ ಮತ್ತೆ ನಾಮನಿರ್ದೇಶನ ಮಾಡಿತು.

ಹಲವಾರು ಅವಧಿಗಳಲ್ಲಿ ನಾಮನಿರ್ದೇಶಿತ ಮಂಡಳಿಯೊಂದರ ಅನುಪಸ್ಥಿತಿಯು ನೀತಿಗಳನ್ನು ರೂಪಿಸುವ ಸಾಮರ್ಥ್ಯ, ಪ್ರದೇಶದ ಅಭಿವೃದ್ಧಿಯ ಮಟ್ಟವನ್ನು ಆವರ್ತಕ ಮೌಲ್ಯಮಾಪನ ಮಾಡುವುದು, ವಿವಿಧ ಹುದ್ದೆಗಳ ರಚನೆಗೆ ಶಿಫಾರಸು ಮಾಡುವುದು ಹಾಗೂ ಪಿಹೆಚ್‌ಸಿಗಳು, ಪಶುವೈದ್ಯಕೀಯ ಔಷಧಾಲಯಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇತ್ಯಾದಿ ಸಂಸ್ಥೆಗಳ ಮಂಜೂರಾತಿ ಮುಂತಾದ ಮಂಡಳಿಯ ವಿವಿಧ ಕಾರ್ಯಗಳ ಮೇಲೆ ಪರಿಣಾಮ ಬೀರಿ ಪ್ರದೇಶದಲ್ಲಿ ಅಭಿವೃದ್ಧಿಯ ಅಸ್ಥಿರ ಬೆಳವಣಿಗೆಗೆ ಕಾರಣವಾಯಿತು.

### *3.1.2 ಸಲಹಾ ಮಂಡಳಿಯನ್ನು ರಚಿಸದಿರುವುದು*

ಮಂಡಳಿಯ ಆದೇಶ 2013 (ಷರತ್ತು 4), ಕೆಕೆಆರ್‌ಡಿಬಿಯ ಕಾರ್ಯದರ್ಶಿಯನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಹೊಂದಿರುವ ಸಲಹಾ ಮಂಡಳಿಯ[7] ರಚನೆ ಮಾಡಬೇಕೆಂದು

[7] ಜಿಲ್ಲಾ ಉಸ್ತುವಾರಿ ಸಚಿವರು, ಪ್ರದೇಶದ ಕಂದಾಯ ಜಿಲ್ಲೆಗಳ ಉಸ್ತುವಾರಿ ಪ್ರಭಾರಿಗಳು, ಪ್ರದೇಶವನ್ನು ಪ್ರತಿನಿಧಿಸುವ ಸಂಸತ್ತಿನ ಎಲ್ಲಾ ಸದಸ್ಯರು, ಪ್ರದೇಶವನ್ನು ಪ್ರತಿನಿಧಿಸುವ ಕರ್ನಾಟಕ ರಾಜ್ಯ ವಿಧಾನಸಭೆಯ ಎಲ್ಲಾ ಸದಸ್ಯರು, ಆ ಪ್ರದೇಶದಲ್ಲಿ ಮತದಾರರಾಗಿ ನೋಂದಾಯಿಸಿರುವ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರು, ಪ್ರದೇಶವನ್ನು ಪ್ರತಿನಿಧಿಸುವ ಜಿಲ್ಲಾ ಪಂಚಾಯತ್‌ಗಳ ಎಲ್ಲಾ ಅಧ್ಯಕ್ಷರು, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು, ಪ್ರದೇಶದ ಕಂದಾಯ ಜಿಲ್ಲೆಗಳ ಎಲ್ಲಾ ಜಿಲ್ಲಾಧಿಕಾರಿಗಳು, ಮಹಾನಗರ ಪಾಲಿಕೆಗಳ ಮೇಯರ್‌ಗಳು ಮತ್ತು ಪ್ರದೇಶದ ನಗರ ಪುರಸಭೆಗಳ ಅಧ್ಯಕ್ಷರು ಹಾಗೂ ಪ್ರದೇಶದ ಕಂದಾಯ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ಗಳ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

ನಿರ್ದಿಷ್ಟಪಡಿಸುತ್ತದೆ. ಪ್ರದೇಶಕ್ಕಾಗಿ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆಯನ್ನು (ಎಡಿಡಿಪಿ) ತಯಾರಿಸುವುದು ಮತ್ತು ಮುಂದಿನ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷ ಸೆಪ್ಟೆಂಬರ್‌ಗೆ ಮೊದಲು ಮಂಡಳಿಗೆ ಅದನ್ನು ಸಲ್ಲಿಸುವುದು ಸಲಹಾ ಮಂಡಳಿಯ ಪ್ರಾಥಮಿಕ ಜವಾಬ್ದಾರಿಯಾಗಿತ್ತು. ಮಂಡಳಿಯ ಪ್ರಾರಂಭವಾದಾಗಿನಿಂದಲೂ ಸಲಹಾ ಮಂಡಳಿಯನ್ನು ರಚಿಸಿರಲಿಲ್ಲ. ಅಲ್ಲದೆ, ಮೇ 2020ರಲ್ಲಿ ಪ್ರತಿ ಜಿಲ್ಲೆಗಳಲ್ಲಿ ಜಿಲ್ಲಾ ಸಲಹಾ ಮಂಡಳಿಗಳನ್ನು ರಚಿಸಲಾಯಿತು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಲಹಾ ಮಂಡಳಿಗಳನ್ನು (ಡಿಎಸಿ) ರಚಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022).

ಮೇ 2020ರವರೆಗೆ ಸಲಹಾ ಮಂಡಳಿಯನ್ನು ರಚಿಸಿರಲಿಲ್ಲ ಎಂಬ ವಾಸ್ತವಾಂಶವನ್ನು ಮಂಡಳಿಯು ಪರಿಗಣಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ ಹಾಗೂ 2013ರ ಮಂಡಳಿಯ ಆದೇಶವನ್ನು ಮೇ 2020ರಲ್ಲಿ ಮಾತ್ರ ಜಿಲ್ಲಾ ಸಲಹಾ ಮಂಡಳಿಗಳನ್ನು ರಚಿಸುವಂತೆ ತಿದ್ದುಪಡಿ ಮಾಡಲಾಗಿತ್ತು. ಅಲ್ಲದೆ, ಪ್ರಾದೇಶಿಕ ನಿಧಿ ಮತ್ತು ಇತರ ವಿವೇಚನಾ ನಿಧಿಗಳಡಿಯಲ್ಲಿ ಕೈಗೊಳ್ಳಬೇಕಾದ ಪ್ರಾದೇಶಿಕ ಮಟ್ಟದ ಮಧ್ಯಸ್ಥಿಕೆಗಳು ಮತ್ತು ಕಾರ್ಯಗಳ ಪ್ರಸ್ತಾವನೆಗಳನ್ನು ಪರಿಗಣಿಸಲು ಮತ್ತು ಅನುಮೋದಿಸಲು ಮಂಡಳಿಯ ಮಟ್ಟದ ಸಲಹಾ ಮಂಡಳಿಯ ಅಗತ್ಯವಿರುತ್ತದೆ ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.

### *3.1.3 ಅನುಷ್ಠಾನ ಸಮಿತಿಯ ರಚಿಸದಿರುವುದು*

ಮಂಡಳಿಯ ಆದೇಶ 2013ರ ಷರತ್ತು 17 ಮತ್ತು 18ರಡಿಯಲ್ಲಿ ನಿಗದಿಪಡಿಸಿರುವಂತೆ, ರಾಜ್ಯ ಸರ್ಕಾರವು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನುಷ್ಠಾನ ಸಮಿತಿಯನ್ನು ರಚಿಸಬೇಕಿತ್ತು ಮತ್ತು ಸಮಿತಿಗಳು ಮಂಡಳಿಯಿಂದ ನಿಯೋಜಿಸಲಾದ ಅಧಿಕಾರವನ್ನು ಚಲಾಯಿಸಬೇಕಿತ್ತು.

ಮಂಡಳಿಯ ಪ್ರಾರಂಭವಾದಾಗಿನಿದಲೂ ಯಾವುದೇ ಮಟ್ಟದಲ್ಲಿ ಅನುಷ್ಠಾನ ಸಮಿತಿಗಳನ್ನು ರಚಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಕಂಡಿಕೆಗಳು 4.4, 4.5 ಮತ್ತು 4.6ರಲ್ಲಿ ಚರ್ಚಿಸಿದಂತೆ ಅನುಷ್ಠಾನ ಸಮಿತಿಗಳನ್ನು ಸ್ಥಾಪಿಸದಿರುವುದು ಮಧ್ಯಸ್ಥಿಕೆಗಳ ಕಾರ್ಯಗತಗೊಳಿಸುವಿಕೆ ಮತ್ತು ಮೇಲ್ವಿಚಾರಣೆಯ ಮೇಲೆ ಪರಿಣಾಮ ಬೀರಿತು ಮತ್ತು ಅನುಷ್ಠಾನದಲ್ಲಿ ವಿಳಂಬ, ಕಳಪೆ ಗುಣಮಟ್ಟದ ಕಾಮಗಾರಿಗಳ ಅನುಷ್ಠಾನ, ಪೂರ್ಣಗೊಂಡ ಯೋಜನೆಗಳ ಬಳಕೆಯಾಗದಿರುವುದು, ಹೆಚ್ಚುವರಿ ವೆಚ್ಚಗಳು ಇತ್ಯಾದಿಗಳಲ್ಲಿ ಪರಿಣಮಿಸಿತು.

ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ನಡೆಸಿದ ಸಭೆಗಳ ಮೂಲಕ ಕಾಮಗಾರಿಗಳ ಪ್ರಗತಿಯ ಮಾಸಿಕ ಮತ್ತು ವಾರ್ಷಿಕ ಪರಿಶೀಲನೆಯನ್ನು ಮಾಡಲಾಗುತ್ತಿದೆ ಎಂದು ಮಂಡಳಿಯು ತಿಳಿಸಿತು (ಜುಲೈ 2022). ಅನುಷ್ಠಾನ ಏಜೆನ್ಸಿಗಳು ಕರ್ತವ್ಯಲೋಪ ಮಾಡಿದ್ದಲ್ಲಿ ಅಂತಹ ತಪ್ಪಿತಸ್ಥ ಏಜೆನ್ಸಿಗಳ ವಿರುದ್ಧ ಮಂಡಳಿಯು ಕಾಲಕಾಲಕ್ಕೆ ಕ್ರಮ ತೆಗೆದುಕೊಳ್ಳುತ್ತಿದೆ ಎಂದೂ ಕೂಡ ತಿಳಿಸಲಾಯಿತು. ರಾಜ್ಯಪಾಲರ ಆದೇಶದಲ್ಲಿ ಕಲ್ಪಿಸಲಾಗಿರುವ ಸಾಂಸ್ಥಿಕ ಕಾರ್ಯವಿಧಾನವು ವಿವಿಧ ಹಂತಗಳಲ್ಲಿ ಕಾಮಗಾರಿಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಅನುಕೂಲವಾಗುತ್ತದೆ ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.

### *3.1.4 ತಜ್ಞರ ಸಮಿತಿಯನ್ನು ರಚಿಸದಿರುವುದು*

ಪ್ರಾದೇಶಿಕ ಅಸಮತೋಲನವನ್ನು ಅಧ್ಯಯನ ಮಾಡಲು, ಬ್ಯಾಕ್‌ಲಾಗ್‌ಗಳ ಪ್ರಮಾಣವನ್ನು ಹಾಗೂ ಅಂತಹ ಬ್ಯಾಕ್‌ಲಾಗ್‌ಗಳನ್ನು ಸರಿಪಡಿಸಲು ಅಗತ್ಯವಿರುವ ಸಂಪನ್ಮೂಲಗಳನ್ನು ನಿರ್ಧರಿಸಲು ಮತ್ತು ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿ ರಾಜ್ಯ ಯೋಜನಾ ಅಥವಾ ಯೋಜನೇತರ ಅಥವಾ ಎರಡೂ ವಲಯದಿಂದ ನಿಧಿಗಳ ವಿಕೇಂದ್ರೀಕರಣದ ಕುರಿತು ಸಲಹೆ ನೀಡಲು ಸ್ಥಾಯಿ ಅಥವಾ ಅಡ್ಹಾಕ್

ತಜ್ಞರ ಸಮಿತಿಗಳನ್ನು ರಚಿಸುವುದನ್ನು ಮಂಡಳಿಯ ಆದೇಶ 2013ರ ಷರತ್ತು 22(2)(ಸಿ) ಅಡಿಯಲ್ಲಿ ಕಲ್ಪಿಸಲಾಗಿದೆ. ಸ್ಥಾಯಿ/ತಜ್ಞ ಸಮಿತಿಯನ್ನು ರಚಿಸಿರಲಿಲ್ಲವೆಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಈ ಬಗ್ಗೆ ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## 3.2 ಮಂಡಳಿಯ ಜವಾಬ್ದಾರಿಗಳು

ಮಂಡಳಿ ಆದೇಶ 2013ರ ಷರತ್ತು 12 ಮಂಡಳಿಗೆ ನಿರ್ದಿಷ್ಟ ಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ವಹಿಸಿಕೊಟ್ಟಿದೆ. ಮಂಡಳಿ ಆದೇಶ 2013 ರಡಿಯಲ್ಲಿ ನಿಯೋಜಿಸಲಾದ ಈ ಪ್ರಮುಖ ಕಾರ್ಯಗಳ ನಿರ್ವಹಣೆಯು ಮಂಡಳಿಯ ಕಾರ್ಯಕ್ಷಮತೆಯ ಮಾನದಂಡವಾಗಿ ಕಾರ್ಯನಿರ್ವಹಿಸುತ್ತದೆ. ಮಂಡಳಿಯಿಂದ ನಿರ್ದಿಷ್ಟಪಡಿಸಿದ ಪ್ರಮುಖ ಕಾರ್ಯಗಳ ನಿರ್ವಹಣೆಯಲ್ಲಿನ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯು, ಕೆಳಗೆ ತಿಳಿಸಿದಂತೆ ಗಮನಿಸಿತು:

| ಉಪ ಷರತ್ತು | ಕಾರ್ಯ | ಲೆಕ್ಕಪರಿಶೋಧನಾ ವೀಕ್ಷಣೆ |
|---|---|---|
| ಬಿ | ತನ್ನ ಪ್ರದೇಶಕ್ಕೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿನ ಅಭಿವೃದ್ಧಿಯ ಸಾಪೇಕ್ಷ ಮಟ್ಟವನ್ನು ಖಚಿತಪಡಿಸಿಕೊಳ್ಳಲು, ಒಟ್ಟಾರೆಯಾಗಿ ರಾಜ್ಯದ ಅಭಿವೃದ್ಧಿಯ ಮಟ್ಟಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಸೂಚಕಗಳ ಆಧಾರ. | ಸೂಕ್ತ ಸೂಚಕಗಳ ಆಧಾರದ ಮೇಲೆ ಮಂಡಳಿಯು ತನ್ನ ಪ್ರದೇಶಕ್ಕೆ ಸಂಬಂಧಿಸಿದಂತೆ ವಿವಿಧ ವಲಯಗಳಲ್ಲಿನ ಅಭಿವೃದ್ಧಿಯ ಮಟ್ಟವನ್ನು ಖಚಿತಪಡಿಸಿಕೊಳ್ಳಬೇಕಿತ್ತು. ಪ್ರತಿ ವಲಯಕ್ಕೆ ದೀರ್ಘಾವಧಿಯ ಆದ್ಯತೆಯ ಗುರಿಗಳನ್ನು ಮತ್ತು ಅವುಗಳನ್ನು ಸಾಧಿಸುವ ಕಾರ್ಯಕ್ರಮಗಳನ್ನು ನಿಗದಿಪಡಿಸುವ ಮೂಲಕ ಮಂಡಳಿಯಲ್ಲಿನ ಯೋಜನೆಯು ವಲಯ–ನಿರ್ದಿಷ್ಟ ವಾಗಿರವೇಕಿತ್ತು. ಪ್ರತಿಯೊಂದು ಕಾರ್ಯಕ್ರಮವೂ ಪ್ರಮುಖ ಫಲಿತಾಂಶಗಳು ಮತ್ತು ದೀರ್ಘಾವಧಿಯ ಗುರಿಗಳನ್ನು ವಿವರಿಸುತ್ತಿತ್ತು. ಆದ್ಯತೆಯ ಕ್ಷೇತ್ರಗಳನ್ನು ಗುರಿಯಾಗಿಸಲು ವಲಯ–ನಿರ್ದಿಷ್ಟ ಯೋಜನೆಗಳನ್ನು ಮಂಡಳಿಯು ತಯಾರಿಸಿರಲಿಲ್ಲ. |
| ಸಿ | ಬ್ಯಾಕ್‌ಲಾಗ್‌ಅನ್ನು ತೆಗೆದುಹಾಕುವಲ್ಲಿ ಹಾಗೂ ತನ್ನ ಪ್ರದೇಶದ ಒಟ್ಟಾರೆ ಅಭಿವೃದ್ಧಿಯನ್ನು ಸಾಧಿಸುವಲ್ಲಿ ವಿವಿಧ ಅಭಿವೃದ್ಧಿ ಪ್ರಯತ್ನಗಳ ಪರಿಣಾಮವನ್ನು ನಿರ್ಣಯಿಸಲು. | ಬ್ಯಾಕ್‌ಲಾಗ್‌ಗಳನ್ನು ಗುರುತಿಸಿರಲಿಲ್ಲ ಮತ್ತು ಪರಿಣಾಮದ ಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ. |
| ಡಿ | ವಾರ್ಷಿಕ ಯೋಜನೆ ಸೇರಿದಂತೆ ಯೋಜನಾ ಅವಧಿಯಲ್ಲಿ ಅಭಿವೃದ್ಧಿ ಮಂಡಳಿಯ ಪ್ರದೇಶದ ಅಭಿವೃದ್ಧಿ ವೆಚ್ಚದ ಮಟ್ಟವನ್ನು ಸೂಚಿಸಲು. | ಮಂಡಳಿಯು ಅಭಿವೃದ್ಧಿ ವೆಚ್ಚದ ಪ್ರಮಾಣದಲ್ಲಿ ಯಾವುದೇ ಸಲಹೆಗಳನ್ನು ನೀಡಿರಲಿಲ್ಲ. |
| ಇ | ಉದ್ಯಮಗಳಿಗೆ ನೀಡಲಾಗುವ ಪ್ರೋತ್ಸಾಹ, ತೆರಿಗೆ ರಜಾ ಮುಂತಾದ ಈ ಪ್ರದೇಶದಲ್ಲಿ ಹೂಡಿಕೆ ಮಾಡುವ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಉದ್ಯೋಗದಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಮೀಸಲಾತಿಯನ್ನು ಒದಗಿಸುವಂತಹ ಆರ್ಥಿಕ ಪರಿಣಾಮಗಳನ್ನು ಹೊಂದಿರುವ ಪ್ರದೇಶಕ್ಕಾಗಿ 'ನೀತಿಗಳನ್ನು' ರಾಜ್ಯಪಾಲರಿಗೆ ಅವರ ಆರ್ಥಿಕ ಮಿತಿಗಳಲ್ಲಿ ಸೂಚಿಸುವುದು. | ಅಂತಹ ಯಾವುದೇ ನೀತಿಗಳನ್ನು ರಾಜ್ಯಪಾಲರಿಗೆ ಸೂಚಿಸಿರಲಿಲ್ಲ. |
| ಎಫ್ | ತನ್ನ ಕಾರ್ಯನಿರ್ವಹಣೆಯ ಬಗ್ಗೆ ವಾರ್ಷಿಕ ವರದಿಯನ್ನು ತಯಾರಿಸುವುದು ಮತ್ತು ಪ್ರತಿ ಹಣಕಾಸು ವರ್ಷದ ಅಂತ್ಯದ ನಂತರದ ಮೂರು ತಿಂಗಳೊಳಗೆ ಅದನ್ನು ಶಾಸಕಾಂಗದ ಮುಂದೆ ಮಂಡಿಸಲು ರಾಜ್ಯಪಾಲರಿಗೆ ಕಳುಹಿಸುವುದು. | ಶಾಸಕಾಂಗದ ಮುಂದೆ ಮಂಡಿಸಲು ರಾಜ್ಯಪಾಲರಿಗೆ ವರದಿಯನ್ನು ಸಲ್ಲಿಸಿರಲಿಲ್ಲ. |

ಸಲಹಾ ಸಂಸ್ಥೆಯೊಂದರ ಸಹಾಯದಿಂದ ಪ್ರಭಾವದ ಮೌಲ್ಯಮಾಪನ ಅಧ್ಯಯನವನ್ನು ಕೈಗೊಳ್ಳಲಾಗಿದೆ ಹಾಗೂ ಮಾರ್ಚ್ 2022ರಲ್ಲಿ ಮಂಡಳಿಯ ಮುಂದೆ ಮಂಡಿಸಲಾಗಿದೆ ಎಂದು ಮಂಡಳಿಯು ತಿಳಿಸಿತು (ಜುಲೈ 2022). ಆದರೆ, ಸಂವಿಧಾನದ 371–ಜೆ ವಿಧಿಯ ಉದ್ದೇಶಗಳನ್ನು ಸಾಧಿಸಲು ಮಂಡಳಿಯ ಕೇಂದ್ರ ಕಾರ್ಯಗಳಾಗಿರುವ ನೀತಿ ಒಳಹರಿವುಗಳನ್ನು ಒದಗಿಸುವ, ಸೂಕ್ತ ಸೂಚಕಗಳನ್ನು ಬಳಸಿಕೊಂಡು ಅಭಿವೃದ್ಧಿಯ ಸಾಪೇಕ್ಷ ಮಟ್ಟವನ್ನು ನಿರ್ಣಯಿಸುವ, ಅಭಿವೃದ್ಧಿಯಲ್ಲಿನ ಬ್ಯಾಕ್‌ಲಾಗ್‌ಗಳ ಲೆಕ್ಕಾಚಾರ ಮಾಡುವ, ಅಭಿವೃದ್ಧಿ ವೆಚ್ಚದ ಮಟ್ಟಗಳ ಕುರಿತು ಸಲಹೆಗಳನ್ನು ನೀಡುವ, ಪ್ರದೇಶದಲ್ಲಿ ಹುದ್ದೆಗಳು ಮತ್ತು

ಸಂಸ್ಥೆಗಳ ರಚನೆಯ ಕುರಿತು ಸಲಹೆಗಳನ್ನು ನೀಡುವ ಇತ್ಯಾದಿಗಳನ್ನು ಕುರಿತು ಮಂಡಳಿಯಿಂದ ನಿರೀಕ್ಷಿಸಿರುವ ಕಾರ್ಯಕ್ರಮಗಳನ್ನು ಕುರಿತು ಮಂಡಳಿಯ ಉತ್ತರವು ಏನೂ ತಿಳಿಸಲಿಲ್ಲ.

### *3.2.1 ಮಂಡಳಿಯ ಕಾರ್ಯನಿರ್ವಹಣೆಗಾಗಿ ನಿಯಮಗಳು ಮತ್ತು ನಿಬಂಧನೆಗಳು*

ಮಂಡಳಿ ಆದೇಶ 2013ರ ಷರತ್ತು 30ರ ಪ್ರಕಾರ, ಮಂಡಳಿ ಆದೇಶ 2013ರ ನಿಬಂಧನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯಪಾಲರು, ಸಂವಿಧಾನದ 371–ಜೆ ಕಲಂ (1)ರಡಿಯಲ್ಲಿ ವ್ಯವಹಾರದ ಸರಿಯಾದ ವಹಿವಾಟಿನ ನಿಯಮಗಳು ಮತ್ತು ನಿಯಮಗಳನ್ನು ಒಳಗೊಂಡಂತೆ, ಆದೇಶದ ಮೂಲಕ, ಕಾಲಕಾಲಕ್ಕೆ, ಅಂತಹ ನಿಯಮಗಳನ್ನು ಮಾಡಬಹುದು. ಸರ್ಕಾರವು ನಿಯಮಗಳನ್ನು ಇನ್ನೂ ರಚಿಸಿರಲಿಲ್ಲ.

ಅಲ್ಲದೆ, ವ್ಯವಹಾರದ ವಹಿವಾಟು, ತನ್ನ ಸಭೆಗಳು ಮತ್ತು ಅನುಷ್ಠಾನ ಸಮಿತಿಗಳ ಸಭೆಗಳು ಮತ್ತು ಮಂಡಳಿಯ ಆದೇಶದ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಿರುವ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಯು ನಿಯಮಗಳನ್ನು ರಚಿಸಬಹುದು ಎಂದು ಮಂಡಳಿ ಆದೇಶ 2013ರ ಷರತ್ತು 31 ನಿರ್ದಿಷ್ಟಪಡಿಸುತ್ತದೆ. ಆದರೂ, ಮಂಡಳಿಯು ಪ್ರಾರಂಭವಾದಾಗಿನಿಂದಲೂ ಯಾವುದೇ ನಿಯಮಗಳನ್ನು ರಚಿಸಿರಲಿಲ್ಲ.

ಕರಡು ನಿಯಮಾವಳಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ (ಮೇ 2016) ಮತ್ತು ಅನುಮೋದನೆಯನ್ನು ನಿರೀಕ್ಷಿಸಲಾಗಿದೆ ಎಂದು ಮಂಡಳಿಯು ತಿಳಿಸಿತು (ಜುಲೈ 2022). ನಿಯಮಗಳು ಮತ್ತು ನಿಬಂಧನೆಗಳ ಅನುಮೋದನೆಯಲ್ಲಿ ವಿಳಂಬಕ್ಕೆ ಕಾರಣಗಳನ್ನು ತಿಳಿಸದೇ ಮಂಡಳಿಗಳ ಉತ್ತರವನ್ನು ಸರ್ಕಾರವು ದೃಢೀಕರಿಸಿತ್ತು. ಮಂಡಳಿಯು ಪ್ರಸ್ತಾವಿಸಿದ ಆಯವ್ಯಯ, ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ನಿಯಮಾವಳಿಗಳು, ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವ್ಯವಹಾರ ನಿಯಮಾವಳಿಗಳ ವಹಿವಾಟು, ಲೆಕ್ಕಪತ್ರ ಕೈಪಿಡಿ ಇತ್ಯಾದಿಗಳು ಸರ್ಕಾರದ ಅನುಮೋದನೆಗೆ ಕಾಯುತ್ತಿವೆ. ಹೀಗೆ, ಆಡಳಿತ ಮಂಡಳಿ ಪ್ರಾರಂಭವಾದಾಗಿನಿಂದಲೂ ಯಾವುದೇ ನಿಯಮಗಳಿಲ್ಲದೆ ಕಾರ್ಯ ನಿರ್ವಹಿಸುತ್ತಿದೆ.

### *3.2.2 ಹುದ್ದೆಗಳ ರಚನೆ*

371–ಜೆ ವಿಧಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ ಜನರಿಗೆ ಒಟ್ಟಾರೆಯಾಗಿ ರಾಜ್ಯದ ಅವಶ್ಯಕತೆಗಳಿಗೆ ಒಳಪಟ್ಟಂತೆ ಸಾರ್ವಜನಿಕ ಉದ್ಯೋಗ, ಶಿಕ್ಷಣ ಮತ್ತು ವೃತ್ತಿಪರ ತರಬೇತಿಯ ವಿಷಯಗಳಲ್ಲಿ ಸಮಾನ ಅವಕಾಶಗಳು ಮತ್ತು ಸೌಲಭ್ಯಗಳನ್ನು ಒದಗಿಸಿದೆ. ಮಂಡಳಿಯ ಆದೇಶ 2013ರ ಷರತ್ತು 12(ಜಿ) ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹುದ್ದೆಗಳ ಸೃಷ್ಟಿ ಮತ್ತು ಸಂಸ್ಥೆಗಳ ಮಂಜೂರಾತಿ ಕುರಿತು ಸರ್ಕಾರಕ್ಕೆ ಸಲಹೆ ನೀಡಲು ಮಂಡಳಿಗೆ ಅಧಿಕಾರ ನೀಡುತ್ತದೆ.

ಹೆಚ್‌ಆರ್‌ಎಮ್‌ಎಸ್[8] ನಿಂದ ದತ್ತಾಂಶವನ್ನು ಪಡೆಯುವ ಮೂಲಕ ರಾಜ್ಯದ ವಿವಿಧ ಪ್ರದೇಶಗಳಲ್ಲಿನ ಸಾರ್ವಜನಿಕ ಉದ್ಯೋಗಿಗಳ ವಿತರಣೆಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. ರಾಜ್ಯದ ಉಳಿದ ಪ್ರದೇಶಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 'ಪ್ರತಿ ಲಕ್ಷ ಜನಸಂಖ್ಯೆಗೆ ಸಾರ್ವಜನಿಕ ನೌಕರರ' ಅನುಪಾತ ಕಡಿಮೆ ಇರುವುದನ್ನು ಗಮನಿಸಲಾಯಿತು. ಎಲ್ಲ ವರ್ಗಗಳಲ್ಲಿ ರಾಜ್ಯ ಸರ್ಕಾರದ ಹುದ್ದೆಗಳ ಜಿಲ್ಲಾವಾರು ಹಂಚಿಕೆಯನ್ನು ಸೂಚಿಸುವ ನಕ್ಷೆಗಳನ್ನು **ಅನುಬಂಧ–3.1**ರಲ್ಲಿ ನೀಡಲಾಗಿದೆ.

[8] ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ–ಇದು ಪ್ರತಿ ಉದ್ಯೋಗಿ ಸೇವೆಗೆ ಸೇರಿದ ದಿನಾಂಕದಿಂದ ಸೇವೆಯ ಅಂತ್ಯದವರೆಗೆ ಅವರ ಸೇವಾ ವಿವರಗಳ ದಾಖಲೆಯನ್ನು ನಿರ್ವಹಿಸಲು ಕರ್ನಾಟಕ ಸರ್ಕಾರವು 2005ರಲ್ಲಿ ಪ್ರಾರಂಭಿಸಿದ ವೆಬ್–ಆಧಾರಿತ ಪೋರ್ಟಲ್ ಆಗಿದೆ.

ಇದಲ್ಲದೆ, ರಾಜ್ಯ ಸರ್ಕಾರದ 44 ಇಲಾಖೆಗಳು ಸ್ಥಳೀಯ ಪದವೃಂದಕ್ಕೆ ಪ್ರದೇಶದ ಅಡಿಯಲ್ಲಿ ನೇರ ನೇಮಕಾತಿಗಾಗಿ 34,962 ಹುದ್ದೆಗಳನ್ನು ಗುರುತಿಸಿದ್ದವು ಎಂಬುದನ್ನು ಹೈದರಾಬಾದ್ ಕರ್ನಾಟಕ ವಿಶೇಷ ಕೋಶದಿಂದ ಲಭ್ಯವಾದ ಮಾಹಿತಿಯಿಂದ ಲೆಕ್ಕಪರಿಶೋಧನೆಯು ಗಮನಿಸಿತು. ಇವುಗಳಲ್ಲಿ 16037 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು 18925 ಹುದ್ದೆಗಳು ಖಾಲಿ ಉಳಿದಿದ್ದವು (ಶೇಕಡಾ 54). ಅದೇ ರೀತಿ, ಬಡ್ತಿಯ ಮೂಲಕ ಭರ್ತಿ ಮಾಡಲು ಗುರುತಿಸಲಾದ 24,401 ಹುದ್ದೆಗಳಲ್ಲಿ 14,155 ಭರ್ತಿಯಾಗಿದ್ದು, ಮಾರ್ಚ್ 2022ರಲ್ಲಿದ್ದಂತೆ 9,156 ಹುದ್ದೆಗಳು (ಶೇಕಡಾ 38) ಖಾಲಿ ಉಳಿದಿದ್ದವು.

ಮಂಡಳಿಯು ಪ್ರಾರಂಭವಾದಾಗಿನಿಂದಲೂ ಹುದ್ದೆಗಳ ಸೃಷ್ಟಿಗೆ ಸರ್ಕಾರಕ್ಕೆ ಸಲಹೆ ನೀಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹುದ್ದೆಗಳ ಸೃಷ್ಟಿ ಅಥವಾ ಖಾಲಿ ಹುದ್ದೆಗಳ ಭರ್ತಿಗೆ ಸಲಹೆ ನೀಡಲು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಮಂಜೂರಾದ ಹುದ್ದೆಗಳು, ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು ಮತ್ತು ಖಾಲಿ ಹುದ್ದೆಗಳಿಗೆ ಸಂಬಂಧಿಸಿದಂತೆ ಮಂಡಳಿಯು ಯಾವುದೇ ದತ್ತಾಂಶವನ್ನು ಹೊಂದಿರಲಿಲ್ಲ. ಅಭಿವೃದ್ಧಿಯನ್ನು ತ್ವರಿತಗೊಳಿಸಲು ಪ್ರದೇಶದಲ್ಲಿ ಸಾಕಷ್ಟು ಹುದ್ದೆಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ಮಂಡಳಿಯ ಪ್ರಯತ್ನಗಳು ಅಸಮರ್ಪಕವಾಗಿದ್ದವು. ಪ್ರತಿ ಲಕ್ಷ ಜನಸಂಖ್ಯೆಯ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಈ ಪ್ರದೇಶವು ಕಡಿಮೆ ಪ್ರಾತಿನಿಧ್ಯವನ್ನು ಹೊಂದಿರುವುದನ್ನು ಮತ್ತು ಪ್ರದೇಶದಲ್ಲಿ ಮಂಜೂರಾದ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆಯ ಖಾಲಿ ಹುದ್ದೆಗಳಿರುವುದನ್ನು ಲೆಕ್ಕಪರಿಶೋಧನಾ ವಿಶ್ಲೇಷಣೆಯು ತೋರಿಸಿತು.

### *3.2.3 ಸಮಾನ ಹಂಚಿಕೆ*

371–ಜೆ ವಿಧಿಯು ಕಲ್ಯಾಣ–ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ನಿಧಿಯ ಸಮಾನ ಹಂಚಿಕೆಯನ್ನು ಒದಗಿಸಿತ್ತು. 'ಸಮಾನ ಹಂಚಿಕೆ[9]' ಎಂಬ ಪದವು ಈ ಕೆಳಗಿನ ಎರಡು ಅಂಶಗಳನ್ನು ಪರಿಗಣಿಸುವುದಾಗಿತ್ತು:

- ಕಳೆದ ಹಲವಾರು ವರ್ಷಗಳಿಂದ ಸಂಗ್ರಹವಾದ ಬ್ಯಾಕ್‌ಲಾಗ್ ಸಮಸ್ಯೆ, ಮತ್ತು;
- ಒಟ್ಟಾರೆಯಾಗಿ ರಾಜ್ಯದ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡುವಲ್ಲಿ ಸಮಾನತೆ.

ಹೀಗೆ, ರಾಜ್ಯದ ಇತರ ಭಾಗಗಳಿಗೆ ಸಮಾನವಾಗಿ ಪ್ರದೇಶದ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಹೂಡಿಕೆಯ ವಿಷಯದಲ್ಲಿ ಬ್ಯಾಕ್‌ಲಾಗ್‌ಅನ್ನು ಮಂಡಳಿಯು ಲೆಕ್ಕ ಹಾಕಬೇಕಿತ್ತು ಮತ್ತು ಅದಕ್ಕೆ ಅನುಗುಣವಾಗಿ ಯೋಜನೆ ಮತ್ತು ಆಯವ್ಯಯವನ್ನು ತಯಾರಿಸಬೇಕಿತ್ತು. ವಿವಿಧ ಕ್ಷೇತ್ರಗಳಲ್ಲಿನ ಅಭಿವೃದ್ಧಿಯಲ್ಲಿನ ಬ್ಯಾಕ್‌ಲಾಗ್‌ಗಳನ್ನು ನಿರ್ಧರಿಸಿರಲಿಲ್ಲ.

ಇದಲ್ಲದೆ, ಮಂಡಳಿಯ ಆದೇಶದ ಷರತ್ತು 22(2)(ಎ) ಪ್ರಕಾರ, ಪ್ರದೇಶದ ಅಭಿವೃದ್ಧಿಗೆ ಸಮಾನವಾದ ಹಣ ಹಂಚಿಕೆಯನ್ನು ಖಚಿತಪಡಿಸಿಕೊಳ್ಳಲು ಮಂಡಳಿಯ ಶಿಫಾರಸುಗಳನ್ನು ರಾಜ್ಯ ಸರ್ಕಾರವು ಪರಿಗಣಿಸಬೇಕಿತ್ತು. ಆದರೆ, ಮಂಡಳಿಯು ಸರ್ಕಾರಕ್ಕೆ ಯಾವುದೇ ಶಿಫಾರಸುಗಳನ್ನು ಮಾಡಿರಲಿಲ್ಲ. ಈ ವಿಷಯದ ಬಗ್ಗೆ ಮಂಡಳಿಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## 3.3 ನೀತಿಗಳು ಮತ್ತು ಯೋಜನೆಗಳು

### *3.3.1 ಕಲ್ಯಾಣ–ಕರ್ನಾಟಕ ಪ್ರದೇಶಕ್ಕೆ ನೀತಿ ನಿರೂಪಣೆ*

ಮಂಡಳಿ ಆದೇಶ 2013ರ ಪ್ರಕಾರ ಆದೇಶದ ಅಧಿಸೂಚನೆಯಾದ (ನವೆಂಬರ್ 2013) ಆರು ತಿಂಗಳುಗಳೊಳಗೆ ರಾಜ್ಯ ಸರ್ಕಾರವು ಪ್ರದೇಶದ ಶೈಕ್ಷಣಿಕ (ತಾಂತ್ರಿಕ ಮತ್ತು ವೃತ್ತಿಪರ) ಸಂಸ್ಥೆಗಳಿಗೆ ವಿಶೇಷ ಸಹಾಯಾನುದಾನ ನೀತಿಯನ್ನು ಜಾರಿಗೆ ತರುವುದರ ಜೊತೆಗೆ ಖಾಸಗಿ ಹೂಡಿಕೆಯನ್ನು ಉತ್ತೇಜಿಸಲು

[9] ಸಂವಿಧಾನ ತಿದ್ದುಪಡಿ ವಿಧೇಯಕ 2012ನ್ನು ಪರಿಗಣಿಸಿದ ಸ್ಥಾಯಿ ಸಮಿತಿಗೆ ಗೃಹ ಸಚಿವಾಲಯ ನೀಡಿದ ವಿವರಣೆಯ ಪ್ರಕಾರ

ಕೈಗಾರಿಕಾ, ಮೂಲಸೌಕರ್ಯ ಮತ್ತು ಇತರ ಹೂಡಿಕೆ ನೀತಿಗಳನ್ನು ಹೊರತರುವ ಅಗತ್ಯವಿದೆ. ಇದಲ್ಲದೆ, ಈ ಪ್ರದೇಶದಲ್ಲಿನ ಕೈಗಾರಿಕೆಗಳು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೀಡಬೇಕಾದ ಪ್ರೋತ್ಸಾಹ ಧನದಂತಹ ಆರ್ಥಿಕ ಪರಿಣಾಮಗಳನ್ನು ಹೊಂದಿರುವ ಪ್ರದೇಶದ ನೀತಿಗಳನ್ನು ಮಂಡಳಿಯು ರಾಜ್ಯಪಾಲರಿಗೆ ಸೂಚಿಸಬೇಕು ಎಂದು ನಿರ್ದಿಷ್ಟಪಡಿಸಲಾಗಿದೆ. ಮಂಡಳಿಯು ಈ ನಿಟ್ಟಿನಲ್ಲಿ ಮಂಡಳಿಯು ಯಾವುದೇ ಕ್ರಮವನ್ನು ಪ್ರಾರಂಭಿಸಲಿಲ್ಲ ಮತ್ತು ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯನ್ನು ಹೊರತುಪಡಿಸಿ ಬೇರೆ ಇಲಾಖೆಗಳು ತಮ್ಮ ನೀತಿಗಳಲ್ಲಿ ಪ್ರದೇಶದ ಒಟ್ಟಾರೆ ಅಭಿವೃದ್ಧಿಗೆ ಕ್ರಮಗಳನ್ನು ಅಳವಡಿಸಿಕೊಂಡಿರಲಿಲ್ಲ.

ಮಂಡಳಿಯು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು (ಜುಲೈ 2022) ಮತ್ತು ರಾಜ್ಯ ಮಟ್ಟದ ನೀತಿಗಳನ್ನು ಅಥವಾ ವಿವಿಧ ಕ್ಷೇತ್ರಗಳಲ್ಲಿ ಯಾವುದೇ ನಿರ್ದಿಷ್ಟ ನೀತಿಗಳನ್ನು ರೂಪಿಸುವಾಗ ಹೂಡಿಕೆಗಳನ್ನು ಒದಗಿಸುವಲ್ಲಿ ಮಂಡಳಿಯು ಭಾಗಿಯಾಗಿಲ್ಲ ಎಂದು ತಿಳಿಸಿತು. ನೀತಿಗಳು ಪ್ರದೇಶವೊಂದರ ಅಭಿವೃದ್ಧಿಯ ಮೇಲೆ ಪ್ರಭಾವ ಬೀರುವ ಸಾಧನಗಳಾಗಿರುವುದರಿಂದ, 371–ಜೆ ವಿಧಿಯ ಉದ್ದೇಶಗಳಿಗಾಗಿ ನೀತಿ ರಚನೆಯಲ್ಲಿ ಮಂಡಳಿಯ ಭಾಗವಹಿಸುವಿಕೆಯ ಮುಖ್ಯವಾಗಿತ್ತು. ಭವಿಷ್ಯದ ನೀತಿ ನಿರೂಪಣೆಗಳಲ್ಲಿ ಮಂಡಳಿಯ ಒಳಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಪ್ರಸ್ತಾಪವಿಸಲಾದ ಕ್ರಮಗಳ ಬಗ್ಗೆ ಸರ್ಕಾರವು ತಿಳಿಸಲಿಲ್ಲ.

### *3.3.2 ಮೂಲಸೌಕರ್ಯ ನೀತಿಯನ್ನು ಅನುಷ್ಠಾನಗೊಳಿಸದಿರುವುದು*

ಸಂವಿಧಾನದ ಅನುಚ್ಛೇದ 371–ಜೆ ವಿಧಿಯಡಿಯಲ್ಲಿ ಪ್ರದೇಶಕ್ಕೆ ನೀಡಲಾದ ವಿಶೇಷ ಸ್ಥಾನಮಾನದ ಹಿನ್ನೆಲೆಯಲ್ಲಿ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಮೂಲಸೌಕರ್ಯ ಸೌಲಭ್ಯಗಳನ್ನು ಆದ್ಯತೆಯ ಆಧಾರದ ಮೇಲೆ ಸುಧಾರಿಸಲು ಕರ್ನಾಟಕ ಮೂಲಸೌಕರ್ಯ ನೀತಿಯಲ್ಲಿ ಈ ಕೆಳಗಿನ ನಿರ್ದಿಷ್ಟ ಕ್ರಮಗಳನ್ನು ಅಳವಡಿಸಿಕೊಂಡಿತು (ಅಕ್ಟೋಬರ್ 2015).

(ಎ) ರಸ್ತೆಗಳು ಮತ್ತು ಸೇತುವೆಗಳು, ಆರೋಗ್ಯ ಸೇವೆಗಳು, ಶಿಕ್ಷಣ, ಕುಡಿಯುವ ನೀರು ಸರಬರಾಜು, ಸಣ್ಣ ನೀರಾವರಿ, ಪಶುಸಂಗೋಪನೆ, ರೇಷ್ಮೆ ಕೃಷಿ, ಅರಣ್ಯ ಮತ್ತು ನಗರಾಭಿವೃದ್ಧಿಯಂತಹ ಪ್ರಮುಖ ಸಾಮಾಜಿಕ ಮತ್ತು ಆರ್ಥಿಕ ಮೂಲಸೌಕರ್ಯಗಳನ್ನು ಪ್ರದೇಶಕ್ಕೆ ಒದಗಿಸುವ ಮೂಲಸೌಕರ್ಯ ಕಾರ್ಯತಂತ್ರ ಯೋಜನೆಯನ್ನು ತಯಾರಿಸುವುದು.

(ಬಿ) ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಕೋಶವನ್ನು ರಚಿಸಿ, ಅದಕ್ಕೆ ಕೆಳಗಿನಂತೆ ಸಜ್ಜುಗೊಳಿಸಲಾಗುವುದು:

(i) ಪ್ರದೇಶದಲ್ಲಿ ಕೈಗೊಳ್ಳಬಹುದಾದ ಸಂಭಾವ್ಯ ಪಿಪಿಪಿ ಯೋಜನೆಗಳನ್ನು ಗುರುತಿಸುವುದು

(ii) ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಖಾಸಗಿ ಡೆವಲಪರ್‌ಗಳ ಆಯ್ಕೆಯನ್ನು ಅನುಕೂಲಗೊಳಿಸುವುದು

(iii) ಈ ಯೋಜನೆಗಳ ಕಾರ್ಯಕ್ಷಮತೆಯನ್ನು ಮೇಲ್ವಿಚಾರಣೆ ಮಾಡುವುದು

(ಸಿ) ತ್ರೈಮಾಸಿಕ ಆಧಾರದ ಮೇಲೆ ಪಿಪಿಪಿ ಯೋಜನೆಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ನೀತಿಯು ಪ್ರಸ್ತಾವಿಸಿತ್ತು. ಸೇವೆಗಳ ವೇಗದ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಪಿಪಿಪಿ ಮೋಡ್‌ನಲ್ಲಿ ಅಳವಡಿಸಲಾಗಿರುವ ಎಲ್ಲಾ ಯೋಜನೆಗಳನ್ನು ತ್ವರಿತವಾಗಿ ನಿಗಾ ವಹಿಸಲಾಗುವುದು.

(ಡಿ) ಪಿಪಿಪಿಯ ಅಗತ್ಯತೆ ಮತ್ತು ಪ್ರಯೋಜನಗಳನ್ನು ಅರ್ಥಮಾಡಿಕೊಳ್ಳಲು ಪ್ರದೇಶದ ಅಧಿಕಾರಿಗಳಿಗೆ ನಿರ್ದಿಷ್ಟ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

ನೀತಿಯಲ್ಲಿ ಸೂಚಿಸಲಾದ ಈ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿರಲಿಲ್ಲ. ಪ್ರದೇಶದಲ್ಲಿ ಇತರೆ ಇಲಾಖೆಗಳು ಕೈಗೆತ್ತಿಕೊಂಡಿದ್ದ ಪಿಪಿಪಿ ಯೋಜನೆಗಳ ಬಗ್ಗೆ ಮಂಡಳಿಗೆ ಯಾವುದೇ ಮಾಹಿತಿ ಇರಲಿಲ್ಲ. ಹೀಗೆ, ಈ ಪ್ರದೇಶದಲ್ಲಿ ಮೂಲಸೌಕರ್ಯಗಳ ಸೃಷ್ಟಿಯಲ್ಲಿ ಇಲಾಖೆಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುವ ಸ್ಥಿತಿಯಲ್ಲಿ ಮಂಡಳಿ ಇರಲಿಲ್ಲ. ತತ್ಪರಿಣಾಮವಾಗಿ, ಪ್ರದೇಶವು ಪಿಪಿಪಿ ವಿಧಾನದ ಮೂಲಸೌಕರ್ಯ ಯೋಜನೆಗಳಿಂದ ಪ್ರಯೋಜನ ಪಡೆಯುವ ಅವಕಾಶವನ್ನು ಕಳೆದುಕೊಂಡಿತು. ಅಧ್ಯಾಯ–IVರಲ್ಲಿ ಚರ್ಚಿಸಿರುವಂತೆ ಸ್ಥಗಿತಗೊಳಿಸಿದ ಕಾಮಗಾರಿಗಳ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

## 3.4 ಮಂಡಳಿಯಿಂದ ಯೋಜನೆ

### *3.4.1 ಮುನ್ನೋಟ ಯೋಜನೆಯನ್ನು ತಯಾರಿಸದಿರುವುದು*

ಮುನ್ನೋಟ ಯೋಜನೆಯು ದೀರ್ಘಾವಧಿಯ ಲಿಖಿತ ಮತ್ತು ಅನುಮೋದಿತ ದಾಖಲೆಯಾಗಿದ್ದು, ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಂಡಳಿಯ ಗುರಿಗಳು, ನೀತಿಗಳು, ಕಾರ್ಯತಂತ್ರಗಳು ಮತ್ತು ಸಾಮಾನ್ಯ ಕಾರ್ಯಕ್ರಮಗಳನ್ನು ಅದು ವಿವರಿಸುತ್ತದೆ. ಮುನ್ನೋಟ ಯೋಜನೆಯು ಹೆಚ್ಚಿನ ವಿವರಗಳಿಗಾಗಿ ಚೌಕಟ್ಟಿನಂತೆ ಕಾರ್ಯನಿರ್ವಹಿಸುತ್ತದೆ ಮತ್ತು ವಾರ್ಷಿಕ ಅಭಿವೃದ್ಧಿ ಯೋಜನೆಗಳ ತಯಾರಿಕೆಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ. ಆದರೆ, ಮಂಡಳಿಯು ಪ್ರಾರಂಭವಾದಾಗಿನಿಂದಲೂ ಮುನ್ನೋಟ ಯೋಜನೆಯನ್ನು ತಯಾರಿಸಿರಲಿಲ್ಲ. ಹೀಗೆ **ಅನುಬಂಧ–3.2**ರಲ್ಲಿ ತೋರಿಸಿರುವಂತೆ ಯಾವುದೇ ದೀರ್ಘಾವಧಿಯ ಚೌಕಟ್ಟು ಇಲ್ಲದೆ ಮಂಡಳಿಯು ತನ್ನ ಕಾರ್ಯ ಯೋಜನೆಗಳಿಗಾಗಿ ಅಳವಡಿಸಿಕೊಂಡ ನಿಧಿಯ ಮಾದರಿಯು ಪ್ರತಿ ವರ್ಷ ನಿರಂತರ ಬದಲಾವಣೆಗೆ ಒಳಗಾಗುತ್ತಿತ್ತು.

ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು (ಜುಲೈ 2022) ಮತ್ತು ಮುನ್ನೋಟ ಯೋಜನೆಯನ್ನು ತಯಾರಿಸಲಿಲ್ಲ ಎಂದು ತಿಳಿಸಿತು. ಆದಾಗ್ಯೂ, ಅಧ್ಯಾಯ–IIರಲ್ಲಿ ವಿವರಿಸಿದಂತೆ ಪ್ರದೇಶದ ಒಟ್ಟಾರೆ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುವ ಮುನ್ನೋಟ ಯೋಜನೆಯನ್ನು ತಯಾರಿಸಲು ಸರ್ಕಾರವು ಯಾವುದೇ ಸಮಯವನ್ನು ನಿಗದಿಪಡಿಸಿರಲಿಲ್ಲ.

### *3.4.2 ಪ್ರದೇಶದ ಆರ್ಥಿಕ ಸಾಮರ್ಥ್ಯದ ಮೌಲ್ಯಮಾಪನ ಮಾಡದಿರುವುದು*

ಪ್ರತಿಯೊಂದು ಪ್ರದೇಶವು ವಿಭಿನ್ನ ನೈಸರ್ಗಿಕ ಸಂಪತ್ತನ್ನು ಹೊಂದಿರುತ್ತದೆ ಮತ್ತು ಹಾಗಾಗಿ ವಿಭಿನ್ನ ಬೆಳವಣಿಗೆಯ ಸಾಮರ್ಥ್ಯವನ್ನು ಹೊಂದಿರುತ್ತದೆ. ಪ್ರಾದೇಶಿಕ ಸಾಮರ್ಥ್ಯಗಳನ್ನು ಉಲ್ಲೇಖಿಸದೆ ಪ್ರಾದೇಶಿಕ ಅಭಿವೃದ್ಧಿಯನ್ನು ಸಾಧಿಸುವ ಯೋಜನೆಯು ಅನುಚಿತವಾದ ಅಭಿವೃದ್ಧಿ ಕಾರ್ಯತಂತ್ರಗಳಿಗೆ ಕಾರಣವಾಗಬಹುದು. ಮಂಡಳಿ ತಯಾರಿಸಿದ ಅಭಿವೃದ್ಧಿ ಯೋಜನೆಗಳು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರವು ನಿಗದಿಪಡಿಸಿದ ಒಟ್ಟಾರೆ ಆದ್ಯತೆಗಳನ್ನು ಪರಿಗಣಿಸಬೇಕು ಎಂದು ಮಂಡಳಿಯ ಆದೇಶ 2013ರ ಷರತ್ತು 5(ii) ಮತ್ತು (iii) ನಿರ್ದಿಷ್ಟಪಡಿಸುತ್ತದೆ ಹಾಗೂ ಹೂಡಿಕೆಯ ಪ್ರಮಾಣ ಮತ್ತು ಸ್ವರೂಪ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಏಜೆನ್ಸಿಗಳು ಮತ್ತು ಇತರ ಹಣಕಾಸು ಸಂಪನ್ಮೂಲಗಳಿಂದ ಈ ಪ್ರದೇಶದಲ್ಲಿ ಮಾಡಲಾಗುವುದು.

ಪ್ರಾದೇಶಿಕ ಅಭಿವೃದ್ಧಿಯ ಒಇಸಿಡಿ[10] ವಿಧಾನಗಳು ಅಭಿವೃದ್ಧಿ ಯೋಜನೆಯಲ್ಲಿ ಈ ಕೆಳಗಿನ ಪ್ರಮುಖ ಲಕ್ಷಣಗಳನ್ನು ಗುರುತಿಸುತ್ತವೆ:

[10] ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿ ಸಂಸ್ಥೆ– ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸಲು ಪ್ರಾದೇಶಿಕ ನೀತಿಗಳನ್ನು ಅಭಿವೃದ್ಧಿಪಡಿಸಲು ಇರುವ ಅಂತರ್–ಸರ್ಕಾರಿ ಸಂಸ್ಥೆ.

- ಸ್ಥಳೀಯ *ಸಂಸ್ಥೆಗಳು*/ಸಂಸ್ಥೆಗಳು ಮತ್ತು ಕಂಪನಿಗಳ ಕಾರ್ಯಕ್ಷಮತೆಯ ಮೇಲೆ ಕೇಂದ್ರೀಕರಿಸುವ ವ್ಯಾಪಕವಾದ ನೇರ ಮತ್ತು ಪರೋಕ್ಷ ಅಂಶಗಳನ್ನು ಒಳಗೊಂಡಿರುವ ಅಭಿವೃದ್ಧಿ ಕಾರ್ಯತಂತ್ರ,
- ಪ್ರಾದೇಶಿಕ ನಿರ್ದಿಷ್ಟ *ಸ್ವತ್ತುಗಳ* ಮೇಲೆ ಕೇಂದ್ರೀಕರಿಸುವುದು ಹಾಗೂ ಟಾಪ್–ಡೌನ್ ಹೂಡಿಕೆಗಳು ಮತ್ತು ವರ್ಗಾವಣೆಗಳ ಮೇಲೆ ಕಡಿಮೆ, ಮತ್ತು
- ಅನಾನುಕೂಲತೆಗಿಂತ ಅವಕಾಶದ ಮೇಲೆ ಒತ್ತು.

ಅಂತಹ ಒಂದು ವಿಧಾನಕ್ಕೆ ಪ್ರದೇಶದ ಆರ್ಥಿಕ ಸಾಮರ್ಥ್ಯದ[11] ಮೌಲ್ಯಮಾಪನದ ಅಗತ್ಯವಿದೆ. ಮಂಡಳಿಯು ಪ್ರದೇಶದ ಆರ್ಥಿಕ ಸಾಮರ್ಥ್ಯದ ಮೌಲ್ಯಮಾಪನ ನಡೆಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಅಂತಹ ಯಾವುದೇ ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ, ಪ್ರದೇಶದ ಸಾಮರ್ಥ್ಯವನ್ನು ನಿಯಂತ್ರಿಸುವ ಚಟುವಟಿಕೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಮಂಡಳಿಯ ಸಾಮರ್ಥ್ಯವು ಸೀಮಿತವಾಗಿತ್ತು.

ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು ಮತ್ತು ಕಾರ್ಯತಂತ್ರದ ಅಭಿವೃದ್ಧಿ ಯೋಜನೆಯನ್ನು ಅಂತಿಮಗೊಳಿಸಲಾಗುತ್ತಿದೆ ಹಾಗೂ ಭವಿಷ್ಯದಲ್ಲಿ ವಾರ್ಷಿಕ ಕಾರ್ಯ ಯೋಜನೆಗಳ ತಯಾರಿಕೆಯಲ್ಲಿ ಅದನ್ನು ಪರಿಗಣಿಸಲಾಗುವುದು ಎಂದು ತಿಳಿಸಿತು (ಜುಲೈ 2022).

### *3.4.3 ರಸ್ತೆ ಸಂಪರ್ಕ ಯೋಜನೆಯ ಅನುಪಸ್ಥಿತಿ*

ಕರ್ನಾಟಕ ಸರ್ಕಾರವು (ಜುಲೈ 2014) ಪ್ರಮುಖ ಪಟ್ಟಣಗಳಿಗೆ ಸಂಪರ್ಕವನ್ನು ಸ್ಥಾಪಿಸಲು ಸಹಾಯ ಮಾಡುವ ಜನಸಂಖ್ಯೆಯ ಸಂಪರ್ಕವನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಪೂರೈಸಲು ಪ್ರಮುಖ ರಸ್ತೆ ಜಾಲವನ್ನು ಅನುಮೋದಿಸಿತು. ಪ್ರದೇಶದಲ್ಲಿ ಸಂಪರ್ಕವನ್ನು ಸುಧಾರಿಸಲು ಮಂಡಳಿಯು ರಸ್ತೆ ವಲಯದಲ್ಲಿ ಗಮನಾರ್ಹ ಹೂಡಿಕೆಗಳನ್ನು ಮಾಡಿತು. ಆದರೆ, ತನ್ನ ಹೂಡಿಕೆಯ ಆದ್ಯತೆಗಳನ್ನು ಬೆಂಬಲಿಸಲು ಪ್ರದೇಶಕ್ಕಾಗಿ ರಸ್ತೆ ಅಭಿವೃದ್ಧಿ ಯೋಜನೆಯನ್ನು ಮಂಡಳಿಯು ತಯಾರಿಸಲಿಲ್ಲ. ಪ್ರದೇಶದಲ್ಲಿ ಸಂಪರ್ಕವಿಲ್ಲದ ವಾಸಸ್ಥಳಗಳ ಸಂಖ್ಯೆಯ ಬಗ್ಗೆ ಮಂಡಳಿಗೆ ಮಾಹಿತಿ ಇರಲಿಲ್ಲ. ವಾಸಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ಬಗ್ಗೆ ಗಮನಹರಿಸದೆ, ಹಣದ ಲಭ್ಯತೆಯ ಆಧಾರದ ಮೇಲೆ ರಸ್ತೆ ಕಾಮಗಾರಿಗಳನ್ನು ನಿರ್ವಹಿಸಿದ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯಾದಗಿರಿ ಜಿಲ್ಲೆಯಲ್ಲಿ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಗಮನಿಸಲಾದ ಕಾಮಗಾರಿಗಳ ಪಟ್ಟಿಯನ್ನು **ಅನುಬಂಧ–3.3**ರಲ್ಲಿ ತೋರಿಸಲಾಗಿದೆ. ಇಂತಹ ನಿದರ್ಶನಗಳು ಸಮಗ್ರ ರಸ್ತೆ ಅಭಿವೃದ್ಧಿ ಯೋಜನೆಯನ್ನು ಹೊಂದುವ ಅಗತ್ಯವನ್ನು ಸೂಚಿಸುತ್ತವೆ.

**ನಿದರ್ಶನ**

2017–18ನೇ ಅವಧಿಯಲ್ಲಿ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಚಟ್ಟನಹಳ್ಳಿ ಗ್ರಾಮದಿಂದ ಖಾನಾಪುರ ಗ್ರಾಮಕ್ಕೆ ರಸ್ತೆ ನಿರ್ಮಾಣ ಕಾಮಗಾರಿಯನ್ನು ಮಂಡಳಿಯು ಕೈಗೆತ್ತಿಕೊಂಡಿತು. ಎರಡು ಗ್ರಾಮಗಳ ನಡುವಿನ ಅಂತರ ಸುಮಾರು 3 ಕಿಮೀ ಆಗಿತ್ತು. ಆದರೆ, ಕೇವಲ 2 ಕಿಲೋಮೀಟರ್ ರಸ್ತೆಯನ್ನು ಯೋಜಿಸಿ ನಿರ್ಮಿಸಲಾಗಿತ್ತು. ಉಳಿದ 1 ಕಿಮೀ ರಸ್ತೆಯು ವಾಹನಗಳು ಸಂಚರಿಸುವ ರಸ್ತೆಯಾಗಿರಲಿಲ್ಲ. ಹೀಗೆ, ಗ್ರಾಮಕ್ಕೆ ಸರ್ವಋತು ರಸ್ತೆ ಸಂಪರ್ಕ ಕಲ್ಪಿಸಿರಲಿಲ್ಲ.

2015ರಿಂದ 2020ರ ಅವಧಿಯಲ್ಲಿ ಕಲ್ಯಾಣ–ಕರ್ನಾಟಕ ವಲಯವಲ್ಲದ ಜಿಲ್ಲೆಗಳಿಗೆ ಹೋಲಿಸಿದರೆ ಕಲ್ಯಾಣ–ಕರ್ನಾಟಕ ವಲಯದ ಜಿಲ್ಲೆಗಳಲ್ಲಿನ ರಸ್ತೆ ಜಾಲವು ಸುಧಾರಿಸಿತ್ತು ಎಂಬುದನ್ನು ಇಸ್ರೋದ ಅಧ್ಯಯನ ವರದಿಯು ತೋರಿಸಿತು. ಅಧ್ಯಯನವು ರಸ್ತೆ ಜಾಲದಲ್ಲಿನ ಸುಧಾರಣೆಗಳನ್ನು ಸೂಚಿಸಿದರೂ, **ಅನುಬಂಧ–3.3** ಮತ್ತು ಮೇಲಿನ ನಿದರ್ಶನದಲ್ಲಿ ಸೂಚಿಸಿರುವಂತೆ ಸಂಪರ್ಕವಿಲ್ಲದ ವಾಸಸ್ಥಳಗಳು ಇನ್ನೂ

[11] ಪ್ರದೇಶವೊಂದು ಹೆಚ್ಚಿನ ಉತ್ಪಾದಕತೆಯನ್ನು ಸಾಧಿಸಲು ಸಮರ್ಥವಾಗಿರುವ ಪ್ರಮುಖ ನಿರ್ಣಾಯಕ ಅಂಶಗಳ ವ್ಯಾಪ್ತಿಯನ್ನು ಆರ್ಥಿಕ ಸಾಮರ್ಥ್ಯ ಎಂದು ಕರೆಯಬಹುದು

ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದವು. ಹೀಗೆ, ಸಮಗ್ರ ರಸ್ತೆ ಸಂಪರ್ಕ ಯೋಜನೆಯ ಅನುಪಸ್ಥಿತಿಯಲ್ಲಿ ಪ್ರದೇಶದ ಸಂಪರ್ಕದಲ್ಲಿನ ಅಂತರವನ್ನು ಮಂಡಳಿಯು ನಿರ್ಣಯಿಸುವ ಸ್ಥಿತಿಯಲ್ಲಿರಲಿಲ್ಲ.

## 3.5 ವಾರ್ಷಿಕ ಕಾರ್ಯ ಯೋಜನೆಗಳ ತಯಾರಿಕೆ

ಮಂಡಳಿಯ ಆದೇಶ 2013ರ ಷರತ್ತು 13ರ ಪ್ರಕಾರ, ಸಲಹಾ ಮಂಡಳಿಯು ಸಿದ್ಧಪಡಿಸಿದ ಕರಡು ಅಭಿವೃದ್ಧಿ ಯೋಜನೆಯನ್ನು ಪರಿಗಣನೆಗೆ ತೆಗೆದುಕೊಂಡ ನಂತರ ಮಂಡಳಿಯು ಪ್ರತಿ ವರ್ಷ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ವಾರ್ಷಿಕ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ಅದನ್ನು ರಾಜ್ಯಪಾಲರಿಗೆ ಕಳುಹಿಸಬೇಕು.

### *3.5.1 ವಾರ್ಷಿಕ ಕಾರ್ಯ ಯೋಜನೆಗಳ ಸಲ್ಲಿಕೆಯಲ್ಲಿ ವಿಳಂಬ*

ಮಂಡಳಿಯ ಆದೇಶ 2013ರ ಪ್ರಕಾರ ಮಂಡಳಿಯು ಹಿಂದಿನ ವರ್ಷದ ಸೆಪ್ಟೆಂಬರ್‌ಗೆ ಮುಂಚಿತವಾಗಿ ಯೋಜನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ರಾಜ್ಯ ಮುಂಗಡಪತ್ರದ ತಯಾರಿಕೆಯ ಸಮಯದಲ್ಲಿ ಸರ್ಕಾರವು ಪರಿಗಣನೆಗೆ ತೆಗೆದುಕೊಳ್ಳಲು ಮಂಡಳಿಯು ಆಯವ್ಯಯದ ಅವಶ್ಯಕತೆಗಳೊಂದಿಗೆ ತನ್ನ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು.

ಪ್ರತಿ ವರ್ಷ ರಾಜ್ಯ ಮುಂಗಡಪತ್ರದ ಘೋಷಣೆಯ ನಂತರವೇ ವಾರ್ಷಿಕ ಕಾರ್ಯ ಯೋಜನೆಗಳ (ಎಎಪಿ) ತಯಾರಿಯನ್ನು ಮಂಡಳಿಯು ಪ್ರಾರಂಭಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮಂಡಳಿ, ಜಿಲ್ಲೆಗಳು ಮತ್ತು ತಾಲೂಕುಗಳ ನಡುವೆ ಮೀಸಲಿಟ್ಟ ಆಯವ್ಯಯ ಮೊತ್ತದ ವಿನಿಯೋಗವನ್ನು ಸೂಚಿಸುವ ತ:ಖ್ತೆಯನ್ನು ಮಂಡಳಿಯು ಸರ್ಕಾರಕ್ಕೆ ಸಲ್ಲಿಸುತ್ತದೆ. ಧನ ವಿನಿಯೋಗವನ್ನು ತೋರಿಸುವ ಈ ತ:ಖ್ತೆಯನ್ನು ಮಂಡಳಿಯ ವಾರ್ಷಿಕ ಕಾರ್ಯ ಯೋಜನೆ (ಎಎಪಿ) ಎಂದು ಪರಿಗಣಿಸಲಾಗುತ್ತಿತ್ತು.

ಕಳೆದ 5 ವರ್ಷಗಳಲ್ಲಿ ಮಂಡಳಿಯು ವಾರ್ಷಿಕ ಕಾರ್ಯ ಯೋಜನೆಗಳನ್ನು ಸಲ್ಲಿಸಿದ ದಿನಾಂಕಗಳನ್ನು **ಕೋಷ್ಟಕ–3.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.2: ಸರ್ಕಾರಕ್ಕೆ ಕಾರ್ಯ ಯೋಜನೆಗಳನ್ನು ಸಲ್ಲಿಸಿದ ದಿನಾಂಕಗಳ ವರ್ಷವಾರು ವಿವರ**

| ಕ್ರಮ ಸಂಖ್ಯೆ | ವರ್ಷ | ಸಲ್ಲಿಸಬೇಕಿದ್ದ ನಿಗದಿತ ದಿನಾಂಕ | ಸಲ್ಲಿಸಿದ ದಿನಾಂಕ | ವಿಳಂಬ |
|---|---|---|---|---|
| 1 | 2016–17 | 30/09/2015 | 23/03/2016 | 5 ತಿಂಗಳುಗಳು |
| 2 | 2017–18 | 30/09/2016 | 23/01/2017 | 3 ತಿಂಗಳುಗಳು |
| 3 | 2018–19 | 30/09/2017 | 07/08/2018 | 10 ತಿಂಗಳುಗಳು |
| 4 | 2019–20 | 30/09/2018 | 30/04/2019 | 6 ತಿಂಗಳುಗಳು |
| 5 | 2020–21 | 30/09/2019 | 13/07/2020 | 9 ತಿಂಗಳುಗಳು |

ಆಧಾರ: ಕೆಕೆಆರ್‌ಡಿಬಿ ಒದಗಿಸಿದ ಮಾಹಿತಿ

ಮಂಡಳಿಯು ರಾಜ್ಯ ಸರ್ಕಾರಕ್ಕೆ ವಾರ್ಷಿಕ ಕಾರ್ಯ ಯೋಜನೆಗಳನ್ನು ಸಲ್ಲಿಸುವಲ್ಲಿ ಮೂರರಿಂದ ಹತ್ತು ತಿಂಗಳವರೆಗೆ ವಿಳಂಬ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಜಿಲ್ಲೆಗಳು ಮತ್ತು ತಾಲೂಕುಗಳು ಕಾರ್ಯಕ್ರಮಗಳ ಪಟ್ಟಿಯನ್ನು ಅಂತಿಮಗೊಳಿಸುವ ಮೊದಲು ಪ್ರತಿ ವರ್ಷ ರಾಜ್ಯ ಮುಂಗಡಪತ್ರದ ಘೋಷಣೆಯ ನಂತರವೇ ಮಂಡಳಿಯು ಎಎಪಿಗಳ ತಯಾರಿಕೆಯನ್ನು ಪ್ರಾರಂಭಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರತಿ ವರ್ಷ ಜಿಲ್ಲೆಗಳಿಗೆ ಮುಂಗಡಪತ್ರವನ್ನು ತಿಳಿಸುವಾಗ ಕಾರ್ಯ ಯೋಜನೆಗಳನ್ನು ತಯಾರಿಸಲು ಮಂಡಳಿಯು ಸಮಯಾವಧಿಯನ್ನು ನೀಡಿತ್ತು ಎಂದು ಸರ್ಕಾರವು ತಿಳಿಸಿತು (ಜುಲೈ 2022). ಮಂಡಳಿಯ ಆದೇಶ 2013ರ ಪ್ರಕಾರ, ಮಂಡಳಿಯು ಪ್ರತಿ ವರ್ಷ ಹಿಂದಿನ ವರ್ಷದ ಸೆಪ್ಟೆಂಬರ್‌ಗೆ ಮೊದಲು ಕರಡು ವಾರ್ಷಿಕ ಕಾರ್ಯ ಯೋಜನೆಯನ್ನು ತಯಾರಿಸಬೇಕಿತ್ತು ಎಂಬುದನ್ನು ಮಂಡಳಿಯು ಪ್ರತಿ ವರ್ಷವೂ ಪಾಲಿಸಿರಲಿಲ್ಲ ಎಂಬ ಅಂಶವನ್ನು ಉತ್ತರವು ಪರಿಗಣಿಸಿರಲಿಲ್ಲ. ಜಿಲ್ಲೆಗಳಿಂದ ಒಳಹರಿವುಗಳ ಸಕಾಲಿಕ ಸ್ವೀಕೃತಿಯಿಂದ ಕೆಳ ಹಂತದ

ಯೋಜನೆಗಳನ್ನು ನಿರ್ಣಯಿಸಲು ಮತ್ತು ಕರಡು ಕಾರ್ಯ ಯೋಜನೆಯನ್ನು ಸಕಾಲದಲ್ಲಿ ಸಿದ್ಧಪಡಿಸಲು ಮಂಡಳಿಗೆ ಅನುಕೂಲವಾಗುತ್ತದೆ.

### *3.5.2 ಫಲಿತಾಂಶ ಆಧಾರಿತ ಯೋಜನೆಯ ಅನುಪಸ್ಥಿತಿ*

ಅಭಿವೃದ್ಧಿ ಸೂಚಕಗಳಲ್ಲಿನ ಸುಧಾರಣೆಯ ವಿಷಯದಲ್ಲಿ ನಿರೀಕ್ಷಿತ ಫಲಿತಾಂಶವನ್ನು ನಿರ್ಧರಿಸುವುದು ಫಲಿತಾಂಶ ಆಧಾರಿತ ಯೋಜನೆಯ ಪ್ರಮುಖ ಲಕ್ಷಣವಾಗಿದೆ. ಆದ್ದರಿಂದ, ಮಂಡಳಿಯ ಕಾರ್ಯಕ್ರಮಗಳಿಂದ ನಿರೀಕ್ಷಿಸುವ ಫಲಿತಾಂಶಗಳೊಂದಿಗೆ ಯೋಜನೆಯನ್ನು ನಿಕಟವಾಗಿ ಜೋಡಿಸಬೇಕು.

ಎಎಪಿಗಳು ಅವುಗಳ ಕಾರ್ಯಕ್ರಮಗಳ ನಿರೀಕ್ಷಿತ ಫಲಿತಾಂಶಗಳನ್ನು ಅಳೆಯಬಹುದಾದ ಪರಿಭಾಷೆಯಲ್ಲಿ ನಿರ್ದಿಷ್ಟಪಡಿಸಿರಲಿಲ್ಲ ಎಂಬುದನ್ನು ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿದ ಎಎಪಿಗಳ ಲೆಕ್ಕಪರಿಶೋಧನಾ ಪರಿಶೀಲನೆಯು ತಿಳಿಯಪಡಿಸಿತು. ಅಳೆಯಬಹುದಾದ ಫಲಿತಾಂಶದ ಗುರಿಗಳ ಕೊರತೆಯಿಂದಾಗಿ, ಮಂಡಳಿಯು 2013ರ ಮಂಡಳಿಯ ಆದೇಶದ ಪ್ರಕಾರ ಅಗತ್ಯವಿರುವಂತೆ ಪ್ರದೇಶದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಪರಿಣಾಮಗಳನ್ನು ನಿಯತಕಾಲಿಕವಾಗಿ ನಿರ್ಧರಿಸುವ ಸ್ಥಿತಿಯಲ್ಲಿರಲಿಲ್ಲ. ಅಳೆಯಬಹುದಾದ ಫಲಿತಾಂಶಗಳ ಅನುಪಸ್ಥಿತಿಯಲ್ಲಿ ಮಂಡಳಿಯು ಕೈಗೊಂಡ ಕಾರ್ಯಕ್ರಮಗಳ ಮೌಲ್ಯಮಾಪನ ಅಧ್ಯಯನದ ಪರಿಣಾಮವನ್ನು ಕೈಗೊಳ್ಳಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ..

### *3.5.3 ಕಾಮಗಾರಿಗಳ ಪಟ್ಟಿಯ ಸಲ್ಲಿಕೆಯಲ್ಲಿ ನ್ಯೂನತೆಗಳು*

ಪ್ರತಿ ವರ್ಷ ಆಯವ್ಯಯ ಘೋಷಣೆಯ ನಂತರ ಮಂಡಳಿಯು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿ ಆಯವ್ಯಯ ಮೊತ್ತದ ಬಳಕೆಗೆ ಪ್ರಸ್ತಾವನೆಗಳನ್ನು ಕೋರುತ್ತದೆ ಮತ್ತು ಅದರಂತೆ ಜಿಲ್ಲೆಗಳು ಕಾಮಗಾರಿಗಳ ಪಟ್ಟಿಯನ್ನು ಮಂಡಳಿಯ ಪರಿಗಣನೆಗೆ ಸಲ್ಲಿಸುತ್ತವೆ. ತಾಲ್ಲೂಕುಗಳು ಮತ್ತು ಜಿಲ್ಲೆಗಳಿಗೆ ಹಣ ಹಂಚಿಕೆ ಪ್ರಮಾಣವನ್ನು ನಿರ್ಧರಿಸಲು ಮಂಡಳಿಯು ಡಾ.ನಂಜುಂಡಪ್ಪ ಸೂಚ್ಯಂಕವನ್ನು ಬಳಸುತ್ತಿತ್ತು. ಹಂಚಿಕೆಯ ಪ್ರಮಾಣವನ್ನು ನಿರ್ಧರಿಸಿದ ನಂತರ, ಜಿಲ್ಲಾ ಮಟ್ಟದ ಅಧಿಕಾರಿಗಳು ನಿಗದಿಪಡಿಸಿದ ಮೊತ್ತವನ್ನು ಬಳಸಿಕೊಳ್ಳಲು ಕಾಮಗಾರಿಗಳ ಪಟ್ಟಿಯನ್ನು ಪ್ರಸ್ತಾವಿಸುತ್ತಾರೆ. ಸಲ್ಲಿಸಲಾದ ಕಾಮಗಾರಿಗಳ ಪಟ್ಟಿಯಲ್ಲಿ ಈ ಕೆಳಗಿನಂತೆ ನ್ಯೂನತೆಗಳಿದ್ದವು:

- ಕಾಮಗಾರಿಗಳ ಅನುಷ್ಠಾನಕ್ಕೆ ಕಾಲಮಿತಿಯನ್ನು ನಮೂದಿಸದೆ ಕಾಮಗಾರಿಗಳ ಪಟ್ಟಿಯನ್ನು ಸಲ್ಲಿಸಲಾಗಿತ್ತು.
- ಅಗತ್ಯವಿರುವ ಒಟ್ಟು ಮೊತ್ತದ ಉಲ್ಲೇಖವನ್ನು ಹೊರತುಪಡಿಸಿ ಯಾವುದೇ ಪ್ರಾಥಮಿಕ ಅಂದಾಜುಗಳಿಂದ ಕಾಮಗಾರಿಗಳು ಬೆಂಬಲಿತವಾಗಿರಲಿಲ್ಲ.
- ಕಾಮಗಾರಿಗಳ ಪಟ್ಟಿಯು ಯಾವುದೇ ಕರಡು ಯೋಜನಾ ವರದಿಗಳನ್ನು ಒಳಗೊಂಡಿರಲಿಲ್ಲ
- ಕಾಮಗಾರಿಗಳ ಪಟ್ಟಿಯು ಪೂರ್ಣಗೊಳಿಸಲು ಅಗತ್ಯವಿರುವ ಒಟ್ಟು ಹೂಡಿಕೆಯನ್ನು ಮತ್ತು ಹೂಡಿಕೆಯ ಅವಧಿಯನ್ನು ಸೂಚಿಸಿರಲಿಲ್ಲ.
- ರಚಿಸಲಾದ ಆಸ್ತಿಯ ಭವಿಷ್ಯದ ನಿರ್ವಹಣೆಯ ಯೋಜನೆಗಳನ್ನು ಕಾಮಗಾರಿಗಳ ಪಟ್ಟಿಯು ಸೂಚಿಸುತ್ತಿರಲಿಲ್ಲ.
- ಪ್ರತ್ಯೇಕ ಇಲಾಖೆಯ ಯೋಜನೆಗಳನ್ನು ಸೂಕ್ತವಾಗಿ ಪರಿಗಣಿಸಿ ಕಾಮಗಾರಿಗಳ ಪಟ್ಟಿಯನ್ನು ತಯಾರಿಸಲಾಗಿದೆ ಎಂಬುದಕ್ಕೆ ದಾಖಲೆಯಲ್ಲಿ ಯಾವುದೇ ಪುರಾವೆಗಳಿಲ್ಲ.

**ನಿದರ್ಶನ**

*2018–19ನೇ ಅವಧಿಯಲ್ಲಿ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ನಾಗನತಿ ಸರಕಾರಿ ಪ್ರೌಢಶಾಲೆಗೆ ನಾಲ್ಕು ಹೆಚ್ಚುವರಿ ತರಗತಿ ಕೊಠಡಿಗಳ ನಿರ್ಮಾಣವನ್ನು ಮಂಡಳಿಯು ಕೈಗೆತ್ತಿಕೊಂಡಿತು. ಶಾಲೆಯಲ್ಲಿ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ, ಕಾಂಪೌಂಡ್ ಗೋಡೆ, ಆಟದ ಮೈದಾನ ಸೇರಿದಂತೆ ಇತರೆ ಮೂಲಸೌಕರ್ಯಗಳ ಕೊರತೆಯಿರುವುದನ್ನು ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಲಾಯಿತು. 15 ಕಿಲೋಮೀಟರ್ ತ್ರಿಜ್ಯದಲ್ಲಿ ಇದರ ಸುತ್ತ ಬೇರೆ ಯಾವುದೇ ಪ್ರೌಢಶಾಲೆ ಇರಲಿಲ್ಲ. ಶಾಲೆಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೂ ಸೌಲಭ್ಯಗಳು ಸಮರ್ಪಕವಾಗಿರಲಿಲ್ಲ. ತಾಲೂಕು ಮಟ್ಟದ ಸಮಗ್ರ ಯೋಜನೆ ಇಲ್ಲದ ಕಾರಣ ಶಾಲೆಯಲ್ಲಿ ನಾಲ್ಕು ಹೆಚ್ಚುವರಿ ತರಗತಿ ಕೊಠಡಿಗಳನ್ನು ಹೊರತುಪಡಿಸಿ ಮೂಲ ಸೌಕರ್ಯಗಳನ್ನು ಕಲ್ಪಿಸಿರಲಿಲ್ಲ.*

ಕಾಮಗಾರಿ ಪಟ್ಟಿಯನ್ನು ಪ್ರಸ್ತಾವಿಸುವಾಗ ಡಾ.ನಂಜುಂಡಪ್ಪ ಸಮಿತಿ ಗುರುತಿಸಿರುವ ಕ್ಷೇತ್ರಗಳನ್ನು ಪರಿಗಣಿಸಿರಲಿಲ್ಲ. ಕೆಳಸ್ತರದ, ಮೇಲ್ಸ್ತರದ, ಸಾಮಾಜಿಕ ಮತ್ತು ಸಾಮಾಜಿಕೇತರ ವಿಷಯದಲ್ಲಿ ಮಂಡಳಿಯು ಅನುಮೋದಿಸಿದ ಹಂಚಿಕೆ ಮಾದರಿಯನ್ನು ಆಧರಿಸಿ ಪಟ್ಟಿಯನ್ನು ತಯಾರಿಸಲಾಗಿತ್ತು.

ತಾಲೂಕನ್ನು ಮೇಲ್ಸ್ತರದ ಕಾರ್ಯ ಯೋಜನೆಯಡಿ ಒಂದು ಘಟಕವನ್ನಾಗಿ ಪರಿಗಣಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಜುಲೈ 2022). ಲಭ್ಯವಿರುವ ಹಣದ ಹಂಚಿಕೆಯನ್ನು ನಿರ್ಧರಿಸಲು ಮತ್ತು ಹಂಚಿಕೆಯನ್ನು ಬಳಸಿಕೊಳ್ಳಲು ಕಾಮಗಾರಿಗಳ ಪಟ್ಟಿಯನ್ನು ಸಿದ್ಧಪಡಿಸಲು ಮಾತ್ರ ಮಂಡಳಿಯು ತಾಲೂಕನ್ನು ಒಂದು ಘಟಕವಾಗಿ ಪರಿಗಣಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಡಾ.ನಂಜುಂಡಪ್ಪ ಸಮಿತಿಯ ವರದಿಯು ತಾಲೂಕನ್ನು ಯೋಜನೆಗಾಗಿ ಒಂದು ಘಟಕವೆಂದು ಗುರುತಿಸಿದ್ದರಿಂದ ತಾಲ್ಲೂಕುಗಳ ನಡುವಿನ ಅಂತರವನ್ನು ನಿವಾರಿಸಲು ಮತ್ತು ಅವುಗಳನ್ನು ರಾಜ್ಯ ಮಟ್ಟಕ್ಕೆ ತರಲು ತರಲು ನಿರ್ದಿಷ್ಟ ಫಲಿತಾಂಶದ ಗುರಿಗಳೊಂದಿಗೆ ತಾಲ್ಲೂಕು ಮಟ್ಟದ ಸಮಗ್ರ ಯೋಜನೆಗಳನ್ನು ತಯಾರಿಸಬೇಕಿತ್ತು. ಡಾ.ನಂಜುಂಡಪ್ಪ ಸಮಿತಿ ವರದಿಯಲ್ಲಿನ ಅಭಾವ ಸೂಚ್ಯಂಕಗಳನ್ನು ಅಳೆಯಬಹುದಾದ ಪರಿಭಾಷೆಯಲ್ಲಿ ತಿಳಿಸದ ಕಾರಣ ತಯಾರಿಸಿದ ಕಾಮಗಾರಿಗಳ ಪಟ್ಟಿಯು ಸಮಗ್ರವಾಗಿರಲಿಲ್ಲ.

### *3.5.4 ಕಾಮಗಾರಿಗಳ ವಿವರವಾದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸದಿರುವುದು*

ಮಂಡಳಿ ಆದೇಶ 2013ರ ಷರತ್ತು 13ರ ಪ್ರಕಾರ ಮಂಡಳಿಯು ಪ್ರತಿ ವರ್ಷ ಕಾರ್ಯ ಯೋಜನೆಯನ್ನು ತಯಾರಿಸುತ್ತದೆ ಮತ್ತು ಅನುಮೋದನೆಗಾಗಿ ರಾಜ್ಯಪಾಲರಿಗೆ ಕಳುಹಿಸುತ್ತದೆ. ಕಾಮಗಾರಿಗಳ ಪಟ್ಟಿಯನ್ನು ಅಂತಿಮಗೊಳಿಸುವ ಮೊದಲೇ ಅನುಮೋದನೆಗಾಗಿ ರಾಜ್ಯಪಾಲರಿಗೆ ಕಾರ್ಯ ಯೋಜನೆಗಳನ್ನು ಸಲ್ಲಿಸುವುದನ್ನು ಮಂಡಳಿಯು ಅಭ್ಯಾಸ ಮಾಡಿಕೊಂಡಿತ್ತು. ಸಲ್ಲಿಸಿದ ಕಾರ್ಯ ಯೋಜನೆಗಳು ತಾಲ್ಲೂಕುಗಳು ಮತ್ತು ಜಿಲ್ಲೆಗಳಿಗೆ ಮೀಸಲಿಟ್ಟ ಹಣವನ್ನು ಮಾತ್ರ ಒಳಗೊಂಡಿದ್ದವು. ಕಾರ್ಯ ಯೋಜನೆಯ ಅನುಮೋದನೆಯ ನಂತರ, ವರ್ಷದಲ್ಲಿ ನಿಗದಿಪಡಿಸಿದ ಮೊತ್ತದ ಬಳಕೆಗಾಗಿ ಕಾಮಗಾರಿಗಳ ಪಟ್ಟಿಯನ್ನು ಸಲ್ಲಿಸಲು ಮತ್ತು ಅನುಮೋದನೆಯನ್ನು ಪಡೆಯಲು ರಾಜ್ಯ ಸರ್ಕಾರವು ಮಂಡಳಿಗೆ ಸೂಚಿಸುತ್ತದೆ.

2013–14ರಿಂದ 2020–21ರವರೆಗಿನ ಕಾಮಗಾರಿಗಳ ಪಟ್ಟಿಯನ್ನು ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರಿಂದಾಗಿ ಕಾಮಗಾರಿಗಳ ವಿವರಗಳನ್ನು ಅಂತಿಮಗೊಳಿಸದೆ ಮಂಡಳಿ ಸಲ್ಲಿಸಿದ ಕಾರ್ಯ ಯೋಜನೆಯು ಅಪೂರ್ಣವಾಗಿತ್ತು. ಹೀಗೆ, ಮಂಡಳಿಯು ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ಸರ್ಕಾರದ ಬಳಿ ಯಾವುದೇ ವಿವರಗಳಿರಲಿಲ್ಲ. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಉದ್ದೇಶಕ್ಕೆ ಕಾಮಗಾರಿಗಳು ಅನುಗುಣವಾಗಿವೆಯೇ ಎಂಬುದನ್ನು ನಿರ್ಣಯಿಸುವ ಸ್ಥಿತಿಯಲ್ಲಿ ಸರ್ಕಾರವು ಇರಲಿಲ್ಲ.

2021–22ನೇ ಅವಧಿಗೆ ಮಂಡಳಿಯು ಕಾಮಗಾರಿಗಳ ವಿವರವಾದ ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಿತ್ತು. ಫೆಬ್ರವರಿ 2022 ರವರೆಗೆ ಕಾಮಗಾರಿಗಳ ಪಟ್ಟಿಯನ್ನು ಅಂಶಿಕವಾಗಿ ಸಲ್ಲಿಸಲಾಗಿತ್ತು ಹಾಗೂ ಮಾರ್ಚ್ 2022 ರಲ್ಲಿದ್ದಂತೆಯೂ ₹55 ಕೋಟಿ ಮೌಲ್ಯದ ಕಾಮಗಾರಿಗಳ ವಿವರಗಳು ಮಂಡಳಿಯಿಂದ ಬಾಕಿ ಉಳಿದಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### *3.5.5 ಇಲಾಖಾ ಯೋಜನೆಗಳೊಂದಿಗೆ ವಿಲೀನಗೊಳಿಸುವಿಕೆ*

ವಿಧಿ 371–ಜೆ ಕಲ್ಯಾಣ ಕರ್ನಾಟಕ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಆಲೋಚಿಸಿತ್ತು ಮತ್ತು ಹಾಗಾಗಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾಮಗಾರಿಗಳನ್ನು ಕಾರ್ಯಗತ ಗೊಳಿಸುವುದು ಅವಶ್ಯಕವಾಗಿದೆ ಮತ್ತು ವಿವಿಧ ಇಲಾಖೆಗಳು/ಏಜೆನ್ಸಿಗಳ ಮೂಲಕ ಕಾರ್ಯಗತ ಗೊಳಿಸಲಾದ ಕಾಮಗಾರಿಗಳು/ಕಾರ್ಯಕ್ರಮಗಳ ವಿಲೀನವನ್ನು ಖಚಿತಪಡಿಸಿಕೊಳ್ಳುವುದು ಮಂಡಳಿಯ ಹೊಣೆಗಾರಿಕೆಯಾಗಿತ್ತು.

ಆದರೆ, ಇತರ ಇಲಾಖೆಗಳು ಜಾರಿಗೊಳಿಸಿದ ಹಲವಾರು ಯೋಜನೆಗಳು/ ಕಾರ್ಯಕ್ರಮಗಳೊಂದಿಗೆ ಕಾರ್ಯಗತಗೊಳಿಸುವ ಏಜೆನ್ಸಿಗಳು ಕೈಗೆತ್ತಿಕೊಂಡ ಕಾಮಗಾರಿಗಳ ವಿಲೀನವನ್ನು ಖಚಿತಪಡಿಸಿಕೊಳ್ಳಲು ಕಾರ್ಯವಿಧಾನವನ್ನು ಮಂಡಳಿಯು ಹೊಂದಿರಲಿಲ್ಲ. ಇತರ ಇಲಾಖೆಗಳು ಕೈಗೊಂಡ ಕಾಮಗಾರಿಗಳನ್ನು ಖಚಿತಪಡಿಸಿಕೊಳ್ಳಲು ಮಂಡಳಿಯು ಅವರ ಕಾರ್ಯ ಯೋಜನೆಗಳನ್ನು ಸಂಗ್ರಹಿಸಿರಲಿಲ್ಲ.

**ನಿದರ್ಶನ**

***₹1.33 ಕೋಟಿ ಮೌಲ್ಯದ ಖರೀದಿಯ ಅತಿವ್ಯಾಪ್ತಿ/ನಕಲು***

*ಮಂಡಳಿಯು 2018–19 ಮತ್ತು 2019–20ರಲ್ಲಿ ನಿರ್ದೇಶಕರು, ಸರ್ವ ಶಿಕ್ಷ ಅಭಿಯಾನ (ಎಸ್‌ಎಸ್‌ಎ), ಬೆಂಗಳೂರು ಅವರಿಗೆ, ತನ್ನ ಅಧಿಕಾರ ವ್ಯಾಪ್ತಿಯ 5,517 ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಸರ್ಕಾರಿ ಪ್ರೌಢಶಾಲೆಗಳಲ್ಲಿ ತಂತ್ರಜ್ಞಾನ ನೆರವಿನ ಕಲಿಕಾ ಕಾರ್ಯಕ್ರಮದ (ಟಿಎಎಲ್‌ಪಿ) ಅನುಷ್ಠಾನಕ್ಕೆ ₹49.28 ಕೋಟಿ ಬಿಡುಗಡೆ ಮಾಡಿತು. ಎಸ್‌ಎಸ್‌ಎ ನಿರ್ದೇಶಕರು ಒಟ್ಟು ₹37.96 ಕೋಟಿ ವೆಚ್ಚದಲ್ಲಿ ಗಣಿತ ಮತ್ತು ವಿಜ್ಞಾನ ಕಿಟ್‌ಗಳು, ಆಲ್–ಇನ್–ಒನ್ ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್‌ಗಳು, ಎಲ್‌ಸಿಡಿ ಪ್ರೊಜೆಕ್ಟರ್, ಯುಪಿಎಸ್ ಬ್ಯಾಟರಿ ಇತ್ಯಾದಿಗಳನ್ನು ಖರೀದಿಸಿ (2020–21) ಪ್ರದೇಶದ 718 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮತ್ತು ಸರ್ಕಾರಿ ಪ್ರೌಢಶಾಲೆಗಳಿಗೆ ಸರಬರಾಜು ಮಾಡಿದ್ದರು.*

*ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸೊಸೈಟಿ ಮತ್ತು ಇಲಾಖೆಯಿಂದ ಅನುದಾನವನ್ನು ಪಡೆಯುತ್ತಿದ್ದ ಕಲಬುರಗಿಯ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘ (ಕೆಕೆಹೆಚ್‌ಆರ್‌ಎಸಿಎಸ್) ಸಹ ಪ್ರತಿ ಘಟಕಕ್ಕೆ ₹0.025 ಕೋಟಿ ವೆಚ್ಚದಲ್ಲಿ ಕಂಪ್ಯೂಟರ್‌ಗಳು, ಯುಪಿಎಸ್, ಲ್ಯಾಪ್‌ಟಾಪ್‌ಗಳು ಮತ್ತು ಎಲ್‌ಸಿಡಿ ಪ್ರೊಜೆಕ್ಟರ್‌ಗಳಂತಹ ವಸ್ತುಗಳನ್ನು ಖರೀದಿಸಿ ಪ್ರದೇಶದ 600 ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಸರ್ಕಾರಿ ಪ್ರೌಢಶಾಲೆಗಳಿಗೆ ಸರಬರಾಜು ಮಾಡಿತ್ತು. ಎರಡೂ ಏಜೆನ್ಸಿಗಳು 53 ಶಾಲೆಗಳಿಗೆ ಒಂದೇ ರೀತಿಯ ವಸ್ತುಗಳನ್ನು ಸರಬರಾಜು ಮಾಡಿದ್ದವು ಎಂದು ದಾಖಲೆಗಳ ಪರಿಶೀಲನೆಯು ತೋರಿಸಿತು. ತತ್ಪರಿಣಾಮವಾಗಿ ₹ 1.32 ಕೋಟಿ (₹ 2,50,000 x 53 ಶಾಲೆಗಳು) ಮೌಲ್ಯದ ವಸ್ತುಗಳ ಅತಿವ್ಯಾಪ್ತಿ/ಎರಡು ಬಾರಿ ಖರೀದಿಯಾಗಿತ್ತು. ಶಾಲೆಗಳು ಒಂದು ಏಜೆನ್ಸಿಯಿಂದ ಸರಬರಾಜಾದ ವಸ್ತುಗಳನ್ನು ಮಾತ್ರ ಬಳಸುತ್ತಿದ್ದವು ಮತ್ತು ಎರಡನೇ ಏಜೆನ್ಸಿಯಿಂದ ಸರಬರಾಜುಗಳನ್ನು ನಿಷ್ಕ್ರಿಯವಾಗಿ ಇಡಲಾಗಿತ್ತು ಎಂಬುದನ್ನು ಅಂತಹ ಎರಡು ಶಾಲೆಗಳಲ್ಲಿ ಸೊಸೈಟಿ ಅಧಿಕಾರಿಗಳೊಂದಿಗೆ ಲೆಕ್ಕಪರಿಶೋಧನಾ ತಂಡವು ನಡೆಸಿದ ಜಂಟಿ ತಪಾಸಣೆಯಲ್ಲಿ ಗಮನಿಸಲಾಯಿತು.*

ಖರೀದಿಯಲ್ಲಿ ಯಾವುದೇ ಅತಿವ್ಯಾಪ್ತಿ ಇಲ್ಲ ಎಂದು ಸರ್ಕಾರ ತಿಳಿಸಿತು. 53 ಶಾಲೆಗಳು ಒಂದೇ ರೀತಿಯ ವಸ್ತುಗಳನ್ನು ಖರೀದಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದ್ದು, ಇದು ಇಲಾಖೆಗಳೊಂದಿಗೆ ಮಂಡಳಿಯ ಸಮನ್ವಯದ ಕೊರತೆಯನ್ನು ತೋರಿಸುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *3.5.6 ಪಂಚಾಯತ್ ರಾಜ್ ಸಂಸ್ಥೆಗಳ ಯೋಜನೆಗಳೊಂದಿಗೆ ವಿಲೀನ*

ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993ರ ಅನುಚ್ಛೇದ 309 ಪಂಚಾಯತ್ ರಾಜ್ ಸಂಸ್ಥೆಗಳು (ಪಿಆರ್‌ಐಗಳು) ಅಭಿವೃದ್ಧಿ ಯೋಜನೆಗಳನ್ನು ತಯಾರಿಸಬೇಕೆಂದು ನಿರ್ದಿಷ್ಟಪಡಿಸಿದೆ. ರಾಜ್ಯವು ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸುವುದನ್ನು ಕಾಯಿದೆಯ ಅನುಚ್ಛೇದ 310 ಕಡ್ಡಾಯಗೊಳಿಸಿದೆ ಮತ್ತು ಅವುಗಳು, ಪಿಆರ್‌ಐಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಯೋಜನೆಗಳನ್ನು ಕ್ರೋಢೀಕರಿಸಿ ಪ್ರಾದೇಶಿಕ ಯೋಜನೆ, ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಅಗತ್ಯತೆಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಮಟ್ಟ, ಇವುಗಳನ್ನು ಪರಿಗಣಿಸಿ ಜಿಲ್ಲೆಯ ಕರಡು ಜಿಲ್ಲಾ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವ ಅಗತ್ಯವಿದೆ. ಸಂವಿಧಾನದ 243 (ಜ಼ಡ್‌ಡಿ) ವಿಧಿಯು ಜಿಲ್ಲೆಯಲ್ಲಿ ಪಿಆರ್‌ಐಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಯೋಜನೆಗಳನ್ನು ಕ್ರೋಢೀಕರಿಸಲು ಮತ್ತು ಒಟ್ಟಾರೆಯಾಗಿ ಜಿಲ್ಲೆಗೆ ಕರಡು ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ಸ್ಥಾಪಿಸುವುದನ್ನು ನಿರ್ದಿಷ್ಟಪಡಿಸಿದೆ. ಪ್ರಾದೇಶಿಕ ಯೋಜನೆ, ಪರಿಸರ ಸಂರಕ್ಷಣೆ, ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿ ಇತ್ಯಾದಿ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವಿನ ಸಾಮಾನ್ಯ ಆಸಕ್ತಿಯ ವಿಷಯಗಳನ್ನು ಪರಿಗಣಿಸಿ ಕರಡು ಯೋಜನೆಗಳನ್ನು ಅಂತಿಮಗೊಳಿಸಬೇಕಿತ್ತು.

ಮಂಡಳಿ, ಅಭಿವೃದ್ಧಿ ಇಲಾಖೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಯೋಜನೆಗಳ ನಡುವೆ ವಿಲೀನವನ್ನು ಖಚಿತಪಡಿಸಿಕೊಳ್ಳಲು ಮಂಡಳಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಜಿಲ್ಲೆಗಳ ಜಿಲ್ಲಾ ಅಭಿವೃದ್ಧಿ ಯೋಜನೆಗಳ ಯಾವುದೇ ಮೌಲ್ಯಮಾಪನವನ್ನು ನಡೆಸಿರಲಿಲ್ಲ.

**ನಿದರ್ಶನ**

***₹1.28 ಕೋಟಿಯ ರಸ್ತೆ ಕಾಮಗಾರಿಯ ಅತಿವ್ಯಾಪ್ತಿ/ನಕಲು***

*2015-16ನೇ ಅವಧಿಯ ಕೆಳಸ್ತರದ ಯೋಜನೆಯಡಿ ಅನುಮೋದಿತ ಕಾರ್ಯ ಯೋಜನೆಯಂತೆ ಕೆಕೆಆರ್‌ಡಿಬಿಯು ಕಲಬುರಗಿ ತಾಲ್ಲೂಕಿನ ಉದನೂರ ಗ್ರಾಮದಿಂದ ಮಿಣಜಗಿ ಗ್ರಾಮಕ್ಕೆ (0.000 ಕಿ.ಮೀ.ನಿಂದ 8.815 ಕಿ.ಮೀ) ರಸ್ತೆ ನಿರ್ಮಾಣದ ಕಾಮಗಾರಿಯನ್ನು ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗಕ್ಕೆ ವಹಿಸಿತು. ಆದರೆ 0.000 ಕಿ.ಮೀ ನಿಂದ 2.870 ಕಿ.ಮೀ ವರೆಗೆ ಅದೇ ಕಾಮಗಾರಿಯನ್ನು ಈಗಾಗಲೇ 'ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ' ಅಡಿಯಲ್ಲಿ ಪಿಆರ್‌ಇಡಿಯ ಯೋಜನಾ ವಿಭಾಗದ ಮೂಲಕ ಕಾರ್ಯಗತಗೊಳಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಟೆಂಡರ್ ಆಹ್ವಾನಿಸುವ ಮುನ್ನ ಕರಡು ಯೋಜನಾ ವರದಿ ಸಿದ್ಧಪಡಿಸಿದ ಸಲಹೆಗಾರರು ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಈ ಅಂಶವನ್ನು ಪರಿಶೀಲಿಸಲಿಲ್ಲ. ಕೆಕೆಆರ್‌ಡಿಬಿ ಕೂಡ ಈ ಅಂಶವನ್ನು ಪರಿಶೀಲಿಸಲಿಲ್ಲ. ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿದ ಮುಖ್ಯ ಅಭಿಯಂತರರು, ಸರ್ಕಾರದ ಇತರೆ ಯಾವುದೇ ಯೋಜನೆಯಲ್ಲಿ ಇದೇ ಕಾಮಗಾರಿ ನಡೆದಿದೆಯೇ ಎಂಬುದನ್ನು ಪರಿಶೀಲಿಸುವಂತೆ ಕಾರ್ಯನಿರ್ವಾಹಕ ಎಂಜಿನಿಯರ್‌ರವರಿಗೆ ಸೂಚಿಸಿರಲಿಲ್ಲ. ಪಿಆರ್‌ಇಡಿ, ಕಲಬುರಗಿಯು ಬಾಕಿ ಕಾಮಗಾರಿಯನ್ನು ಮಾತ್ರ ನಿರ್ವಹಿಸಬೇಕಾಗಿತ್ತು ಮತ್ತು ಅದರ ಪ್ರಕಾರ ಗುತ್ತಿಗೆದಾರನಿಗೆ 8.815 ಕಿಮೀ ಸಂಪೂರ್ಣ ವಿಸ್ತರಣೆಗೆ ₹3.94 ಕೋಟಿ ಪಾವತಿಸುವುದರ ಬದಲಾಗಿ ₹2.66 ಕೋಟಿಗೆ ಪಾವತಿಯನ್ನು ಸೀಮಿತಗೊಳಿಸಬೇಕಿತ್ತು (ಒಂದು ಕಿ.ಮೀ ಕಾಮಗಾರಿಗೆ ₹ 0.45 ಕೋಟಿ x ಬಾಕಿ ಉಳಿದಿರುವ 5.945). ಗುತ್ತಿಗೆದಾರರಿಗೆ ಸಂಪೂರ್ಣ ವಿಸ್ತರಣೆಗೆ ಪಾವತಿಸಿದ್ದು ₹1.28 ಕೋಟಿ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.*

ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ವಾರ್ಷಿಕ ಕಾರ್ಯ ಯೋಜನೆಯನ್ನು ಮಂಡಳಿಯು ಅನುಮೋದಿಸಲಾಯಿತು ಎಂದು ಸರ್ಕಾರವು ತಿಳಿಸಿತು (ಜುಲೈ 2022). ವಿವಿಧ ಅಭಿವೃದ್ಧಿ ಇಲಾಖೆಗಳ ಅವಶ್ಯಕತೆಗಳನ್ನು ಸಂಗ್ರಹಿಸಲು ಮಂಡಳಿಯು ಕಾರ್ಯವಿಧಾನವನ್ನು ಸ್ಥಾಪಿಸದಿರುವುದನ್ನು

ಲೆಕ್ಕಪರಿಶೋಧನೆಯು ಗಮನಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಜಿಲ್ಲಾ ಕಾರ್ಯ ಯೋಜನೆಗಳನ್ನು ತಯಾರಿಸುವಾಗ ಇತರ ಇಲಾಖೆಗಳ ಅಥವಾ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯ ಯೋಜನೆಗಳನ್ನು ಚರ್ಚಿಸಲಾಗಿತ್ತು ಮತ್ತು ಪರಿಗಣನೆಗೆ ತೆಗೆದುಕೊಳ್ಳಲಾಗಿತ್ತು ಎಂಬುದನ್ನು ಸೂಚಿಸಲು ಯಾವುದೇ ದಾಖಲೆಗಳು ಲಭ್ಯವಿರಲಿಲ್ಲ. ಹೀಗೆ, ಕಾಮಗಾರಿಗಳ ಅತಿವ್ಯಾಪ್ತಿಯನ್ನು ತಪ್ಪಿಸಲು ಯೋಜನೆಗಳ ವಿಲೀನವನ್ನು ಖಚಿತಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಬಲಪಡಿಸುವ ಅಗತ್ಯವಿದೆ ಎಂದು ಲೆಕ್ಕಪರಿಶೋಧನೆಯು ಅಭಿಪ್ರಾಯಪಟ್ಟಿದೆ.


## 3.6 ಮಂಡಳಿಯಿಂದ ಹಣ ಹಂಚಿಕೆ

ಮಂಡಳಿಯು ಜಿಲ್ಲೆಗಳು ಮತ್ತು ತಾಲೂಕುಗಳಿಗೆ ಮುಖ್ಯವಾಗಿ ಸಾಮಾಜಿಕ ವಲಯ ಮತ್ತು ಸಾಮಾಜಿಕೇತರ ವಲಯ ಎಂಬ ಎರಡು ವಿಭಾಗಗಳ ಅಡಿಯಲ್ಲಿ ಹಣವನ್ನು ಹಂಚಿಕೆ ಮಾಡುತ್ತದೆ. ನಿಧಿಯ ಒಂದು ಭಾಗವನ್ನು ಅಧ್ಯಕ್ಷರ ವಿವೇಚನಾ ಕೋಟಾ, ಮುಖ್ಯಮಂತ್ರಿಗಳ ವಿವೇಚನಾ ಕೋಟಾ, ಸರ್ಕಾರಿ ಕೋಟಾ ಮತ್ತು ಪ್ರಾದೇಶಿಕ ನಿಧಿಯಂತಹ ನಿರ್ದಿಷ್ಟ ಕೋಟಾಗಳಿಗೆ ಮೀಸಲಿಡಲಾಗಿದೆ.

ಡಾ.ನಂಜುಂಡಪ್ಪ ಸಮಿತಿಯು ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಐದು[12] ಪ್ರಮುಖ ಕ್ಷೇತ್ರಗಳ ಅಡಿಯಲ್ಲಿ 35 ಸೂಚಕಗಳನ್ನು ಪರಿಗಣಿಸಿತ್ತು. ಸಮಿತಿಯು ಅಳವಡಿಸಿಕೊಂಡ 35 ಸೂಚಕಗಳನ್ನು **ಅನುಬಂಧ–3.4**ರಲ್ಲಿ ನೀಡಲಾಗಿದೆ.

ಇದಲ್ಲದೆ, ಮಹತ್ವಾಕಾಂಕ್ಷೆಯ ಜಿಲ್ಲೆಗಳಿಗಾಗಿ ಎನ್ಐಟಿಐ ಆಯೋಗ್ ಅಳವಡಿಸಿಕೊಂಡ ಸೂಚಕ ಚೌಕಟ್ಟು (2017–18) ಐದು[13] ವಿಶಾಲ ಸಾಮಾಜಿಕ–ಆರ್ಥಿಕ ವಿಷಯಗಳಡಿಯಲ್ಲಿ 49 ಕಾರ್ಯ ಕ್ಷೇತ್ರಗಳನ್ನು ಗುರುತಿಸಿತ್ತು. ಈ ಸೂಚಕ ಚೌಕಟ್ಟುಗಳು ಒಟ್ಟಾರೆ ಪ್ರಗತಿಯನ್ನು ಸಾಧಿಸಲು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಬಹು ಕ್ಷೇತ್ರಗಳ ಮೇಲೆ ಕೇಂದ್ರೀಕೃತ ಕ್ರಮಗಳ ಅಗತ್ಯತೆಯನ್ನು ಒತ್ತಿ ಹೇಳುತ್ತವೆ. ಆದರೆ, ಮಂಡಳಿಯಿಂದ ವಿವಿಧ ಕ್ಷೇತ್ರಗಳ ನಡುವಿನ ಹಣದ ಹಂಚಿಕೆಯು ಡಾ.ನಂಜುಂಡಪ್ಪ ಸಮಿತಿಯ ಅಥವಾ ನೀತಿ ಆಯೋಗದ ಸೂಚಕಗಳಿಗೆ ಅನುಗುಣವಾಗಿರಲಿಲ್ಲ. ಡಾ.ನಂಜುಂಡಪ್ಪ ಸಮಿತಿಯ ಪ್ರಕಾರ ವಲಯವಾರು ಹಂಚಿಕೆಯ ಹೋಲಿಕೆ ಮತ್ತು ಮಂಡಳಿಯ ಹಂಚಿಕೆಯನ್ನು ಕೆಳಗಿನ **ನಕ್ಷೆ–3.1**ರಲ್ಲಿ ನೀಡಲಾಗಿದೆ:

**ನಕ್ಷೆ–3.1: ಡಾ.ನಂಜುಂಡಪ್ಪ ಸಮಿತಿಯ ವಲಯದ ಹಂಚಿಕೆಯೊಂದಿಗೆ ಮಂಡಳಿಯ ನಿಧಿ ಹಂಚಿಕೆಯ ಶೇಕಡಾವಾರು ಹೋಲಿಕೆ**




ಆಧಾರ: ಮಂಡಳಿಯು ಒದಗಿಸಿದ ಹೈಕಾಸಾಫ್ಟ್ ದತ್ತಸಂಚಯ

[12] ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ವ್ಯಾಪಾರ ಮತ್ತು ಹಣಕಾಸು, ಮೂಲಸೌಕರ್ಯ (ಆರ್ಥಿಕ), ಮೂಲಸೌಕರ್ಯ (ಸಾಮಾಜಿಕ) ಮತ್ತು ಜನಸಂಖ್ಯಾ ಗುಣಲಕ್ಷಣಗಳು.

[13] ಆರೋಗ್ಯ ಮತ್ತು ಪೌಷ್ಟಿಕಾಂಶ, ಶಿಕ್ಷಣ, ಕೃಷಿ ಮತ್ತು ಜಲ ಸಂಪನ್ಮೂಲಗಳು, ಹಣಕಾಸು ಸೇರ್ಪಡೆ ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ಮೂಲಸೌಕರ್ಯ.

2013–14ರಿಂದ 2021–22ರ ಅವಧಿಯಲ್ಲಿ ವಿವಿಧ ವಲಯಗಳಡಿಯಲ್ಲಿ ಮಂಡಳಿಯಿಂದಾದ ನಿಧಿಯ ವಿವರವಾದ ಹಂಚಿಕೆ ಮತ್ತು ವೆಚ್ಚವನ್ನು **ಅನುಬಂಧ–3.5ರಲ್ಲಿ** ನೀಡಲಾಗಿದೆ., ಇತರೆ ವಲಯಗಳ ಅಗತ್ಯತೆಗಳನ್ನು ರಾಜಿ ಮಾಡಿಕೊಂಡು ರಸ್ತೆ ಸಂಪರ್ಕಕ್ಕೆ ಸಂಬಂಧಿಸಿದ ಕಾಮಗಾರಿಗಳಿಗೆ ಮಂಡಳಿಯು ಆದ್ಯತೆ ನೀಡಿರುವುದನ್ನು ಗಮನಿಸಲಾಯಿತು. ಡಾ.ನಂಜುಂಡಪ್ಪ ಸಮಿತಿ ಗುರುತಿಸಿರುವ ಇತರೆ ಕ್ಷೇತ್ರಗಳಾದ ಕೃಷಿ ಮತ್ತು ಸಂಬಂಧಿತ ವಲಯ, ಕೈಗಾರಿಕೆ, ವ್ಯಾಪಾರ ಮತ್ತು ಹಣಕಾಸು ಇತ್ಯಾದಿ ಕ್ಷೇತ್ರಗಳಿಗಿನ ಹಂಚಿಕೆಯು ರಸ್ತೆ ಮತ್ತು ಕಟ್ಟಡಗಳ ಹಂಚಿಕೆಗೆ ಹೋಲಿಸಿದರೆ ಮಹತ್ವದ್ದಾಗಿರಲಿಲ್ಲ.

ನೀತಿ ಆಯೋಗವು ಅಳವಡಿಸಿಕೊಂಡ ಸೂಚಕಗಳ ಚೌಕಟ್ಟು ವಿಶಾಲ ತಳಹದಿ ಹೊಂದಿದ್ದು ಹಣಕಾಸಿನ ಹಂಚಿಕೆಯನ್ನು ಆಧರಿಸಿಲ್ಲ ಎಂದು ಮಂಡಳಿಯು ತಿಳಿಸಿತು (ಜುಲೈ 2022). ಹಂಚಿಕೆಗಾಗಿ ಮಂಡಳಿಯು ಬಳಸುವ ಡಾ.ನಂಜುಂಡಪ್ಪ ಸಮಿತಿ ಸೂಚ್ಯಂಕವು ಸ್ಥಳೀಯ ಅಗತ್ಯತೆಗಳು ಮತ್ತು ಆದ್ಯತೆಗಳ ಆಧಾರದ ಮೇಲಿದ್ದು, ಹೆಚ್ಚು ಸಮಗ್ರವಾಗಿದೆ ಮತ್ತು ಸಂಪನ್ಮೂಲ ಹಂಚಿಕೆಗಾಗಿ ರಾಜ್ಯ ಸರ್ಕಾರದಿಂದ ಇದನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಕೂಡ ತಿಳಿಸಲಾಯಿತು. ಆದರೆ, ಮಂಡಳಿಯ ವೆಚ್ಚದ ಮಾದರಿಯು ಡಾ.ನಂಜುಂಡಪ್ಪ ಸಮಿತಿಯ ಸೂಚಕಗಳೊಂದಿಗೆ ಹೊಂದಿಕೆಯಾಗುತ್ತಿರಲಿಲ್ಲ ಎಂಬ ಅಂಶವನ್ನು ಪರಿಗಣಿಸಲಿಲ್ಲ ಮತ್ತು ರಸ್ತೆಗಳು, ಸೇತುವೆಗಳು ಮತ್ತು ಕಟ್ಟಡಗಳ ಮೇಲೆ ಕಾರ್ಯಕ್ರಮಗಳು ಕೇಂದ್ರೀಕೃತವಾಗಿದ್ದವು.

ಕೆಳಗೆ ವಿವರಿಸಿದಂತೆ ಅಭಿವೃದ್ಧಿ ನಿಯತಾಂಕಗಳ ಪ್ರಕಾರ ತಾಲೂಕುವಾರು ಮೌಲ್ಯಮಾಪನ/ಯೋಜನೆ/ಕಾರ್ಯಕ್ರಮಗಳನ್ನು ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

***ನಿದರ್ಶನ***

2002ರ ಡಾ.ನಂಜುಂಡಪ್ಪ ಸಮಿತಿಯ ವರದಿಯಂತೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ಅತ್ಯಂತ ಹಿಂದುಳಿದ ತಾಲೂಕುಗಳ ವಿಭಾಗದಲ್ಲಿತ್ತು. 2019–20ರ ಅವಧಿಯ ಸೂಚಕ ಅಂಕಿಅಂಶಗಳ ವಿಶ್ಲೇಷಣೆಯು ತಾಲೂಕು ಅತ್ಯಂತ ಹಿಂದುಳಿದ ವರ್ಗದಲ್ಲಿಯೇ ಉಳಿದಿತ್ತು ಎಂಬುದನ್ನು ತೋರಿಸಿತು. 2013–14ರಿಂದ 2020–21ರ ಅವಧಿಯಲ್ಲಿ ತಾಲೂಕಿಗೆ ಮಂಡಳಿಯಿಂದ ಒಟ್ಟು ಹಣದ ಹಂಚಿಕೆಯು ಈ ಕೆಳಗಿನಂತಿತ್ತು:

| ವಲಯದ ಹೆಸರು | ಒಟ್ಟು ಹಂಚಿಕೆ | ಹಂಚಿಕೆಯ ಶೇಕಡಾವಾರು |
|---|---|---|
| ರಸ್ತೆಗಳು ಮತ್ತು ಸೇತುವೆಗಳು | 13,138.79 | 40.46 |
| ಶಿಕ್ಷಣ | 8,578.16 | 26.41 |
| ರಸ್ತೆ ಮತ್ತು ಸಂಪರ್ಕ | 5,102.37 | 15.71 |
| ಇತರೆ | 1,350.00 | 4.16 |
| ನೀರು ಸರಬರಾಜು | 1266.53 | 3.90 |
| ನೈರ್ಮಲ್ಯ | 735.00 | 2.26 |
| ಬಿಸಿಎಮ್ | 654.51 | 2.02 |
| ಆರೋಗ್ಯ | 551.28 | 1.70 |
| ಮಹಿಳೆಯರು ಮತ್ತು ಮಕ್ಕಳು | 299.45 | 0.92 |
| ಸಾಮಾಜಿಕ | 232.82 | 0.72 |
| ಸಮಾಜ ಕಲ್ಯಾಣ | 229.00 | 0.71 |
| ಎಮ್ಐಎನ್ | 150.00 | 0.46 |
| ಗ್ರಂಥಾಲಯ | 106.59 | 0.33 |
| ನೀರಾವರಿ | 81.00 | 0.25 |

| |
|---|
| ಡಾ.ನಂಜುಂಡಪ್ಪ ಸಮಿತಿಯ ಈ ಕೆಳಗಿನ ಸೂಚಕಗಳು ತಾಲೂಕಿನ ಹಿನ್ನಡೆಗೆ ಕಾರಣವಾಗಿರುವುದನ್ನು ಗಮನಿಸಲಾಯಿತು |
| A7: ಪ್ರತಿ ಲಕ್ಷ ಗ್ರಾಮೀಣ ಜನಸಂಖ್ಯೆಗೆ ಟ್ರ್ಯಾಕ್ಟರ್‌ಗಳ ಸಂಖ್ಯೆ |
| A9: ಕೃಷಿಗೆ ತಲಾ ಬ್ಯಾಂಕ್ ಸಾಲ (ವಾಣಿಜ್ಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು) (ರೂಪಾಯಿಗಳಲ್ಲಿ) |
| I1: ಪ್ರತಿ ಲಕ್ಷ ಜನಸಂಖ್ಯೆಗೆ ಕೈಗಾರಿಕಾ ಘಟಕಗಳ ಸಂಖ್ಯೆ |
| I2: ಒಟ್ಟು ಕಾರ್ಮಿಕರಿಗೆ ಕೈಗಾರಿಕಾ ಕಾರ್ಮಿಕರ ಶೇಕಡಾವಾರು |
| I3: ಬ್ಯಾಂಕುಗಳಿಂದ ತಲಾ ಅಭಿವೃದ್ಧಿ ಸಾಲ. |
| I4: ಪ್ರತಿ ಲಕ್ಷ ಜನಸಂಖ್ಯೆಗೆ ಬ್ಯಾಂಕ್ ಶಾಖೆಗಳ ಸಂಖ್ಯೆ |
| E2: ಪ್ರತಿ ಲಕ್ಷ ಜನಸಂಖ್ಯೆಗೆ ದೂರವಾಣಿಗಳ ಸಂಖ್ಯೆ |
| E6: ಪ್ರತಿ ಲಕ್ಷ ಜನಸಂಖ್ಯೆಗೆ ಮೋಟಾರು ವಾಹನಗಳ ಸಂಖ್ಯೆ |
| E7: ಪ್ರತಿ ಲಕ್ಷ ಜನಸಂಖ್ಯೆಗೆ ಸಹಕಾರಿ ಸಾಲ ಸಂಸ್ಥೆಗಳ ಸಂಖ್ಯೆ (ಕೃಷಿ ಮತ್ತು ಕೃಷಿಯೇತರ) |
| S1: 10,000 ಜನಸಂಖ್ಯೆಗೆ ವೈದ್ಯರ ಸಂಖ್ಯೆ (ಸರ್ಕಾರಿ ಮತ್ತು ಖಾಸಗಿ). |
| S5: 6ರಿಂದ 14 ವರ್ಷ ವಯಸ್ಸಿನ ಶಾಲೆಯಿಂದ ಹೊರಗುಳಿದ ಮಕ್ಕಳ ಶೇಕಡಾವಾರು |
| P4: ಒಟ್ಟು ಕಾರ್ಮಿಕರಿಗೆ ಕೃಷಿಯೇತರ ಕಾರ್ಮಿಕರ ಶೇಕಡಾವಾರು |
| ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಂಬಂಧಿಸಿದ ಸೂಚ್ಯಂಕಗಳು ತಾಲೂಕಿನ ಹಿನ್ನಡೆಗೆ ಕಾರಣವಾಗುತ್ತಿದ್ದರೂ ಮಂಡಳಿಯು ತಾಲೂಕಿನಲ್ಲಿ ಆ ಕ್ಷೇತ್ರಗಳಿಗೆ ಯಾವುದೇ ಹಂಚಿಕೆ ಮಾಡಿರಲಿಲ್ಲ. |

### *3.6.1 ಹಂಚಿಕೆಗೆ ಹಳೆಯ ದತ್ತಾಂಶದ ಬಳಕೆ*

ಡಾ.ನಂಜುಂಡಪ್ಪ ಸಮಿತಿಯು ಸಿದ್ಧಪಡಿಸಿದ ಸಂಚಿತ ಅಭಾವ ಸೂಚ್ಯಂಕವನ್ನು[14] (ಸಿಡಿಐ) ಆಧರಿಸಿ ಮಂಡಳಿಯು ತಾಲ್ಲೂಕುಗಳು ಮತ್ತು ಜಿಲ್ಲೆಗಳಿಗೆ ಹಣವನ್ನು ಹಂಚಿಕೆ ಮಾಡುತ್ತಿತ್ತು. 2021 ರಲ್ಲಿದ್ದಂತೆಯೂ, ಅಭಾವದ ಅಳತೆಯನ್ನಾಗಿ ಮತ್ತು ಜಿಲ್ಲೆಗಳು ಮತ್ತು ತಾಲೂಕುಗಳಿಗೆ ಅರ್ಹವಾದ ಹಂಚಿಕೆಯ ಪ್ರಮಾಣವನ್ನು ನಿರ್ಧರಿಸಲು 2002ರಲ್ಲಿ ಡಾ.ನಂಜುಂಡಪ್ಪ ಸಮಿತಿಯು ಬಳಸಿದ ಸಿಡಿಐ ಮೌಲ್ಯಗಳನ್ನು ಮಂಡಳಿಯು ಅವಲಂಬಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎರಡು ದಶಕಗಳಲ್ಲಿ ಈ ಪ್ರದೇಶದಲ್ಲಿನ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳಲ್ಲಿನ ಬದಲಾವಣೆಗಳನ್ನು ಪ್ರತಿಬಿಂಬಿಸಲು ಸಿಡಿಐ ಸೂಚ್ಯಂಕವನ್ನು ನವೀಕರಿಸಲು ಯಾವುದೇ ಪ್ರಯತ್ನಗಳನ್ನು ಮಾಡಿರಲಿಲ್ಲ.

ಮಂಡಳಿಯು 2002ರ ಸಿಡಿಐ ಮೌಲ್ಯಗಳ ಮೇಲೆ ಅವಲಂಬಿತವಾಗಿ ಎರಡು[15] ತಾಲೂಕುಗಳಿಗೆ ಹಣವನ್ನು ಹಂಚಿಕೆ ಮಾಡುವಾಗ ಸಮಿತಿಯು ಸಿಡಿಐಗಿಂತ ಹೆಚ್ಚಿನ ಅಭಾವ ಸೂಚ್ಯಂಕವನ್ನು ಅಳವಡಿಸಿಕೊಂಡಿದ್ದು ಆ ತಾಲೂಕುಗಳಿಗೆ ಹೆಚ್ಚಿನ ಮೊತ್ತವನ್ನು ಹಂಚಿಕೆ ಮಾಡುವುದನ್ನು ಅನುಕೂಲಗೊಳಿಸಿತು.

ಹೊಸ ಸಿಡಿಐ ಸೂಚ್ಯಂಕವನ್ನು ಮರು ಲೆಕ್ಕಾಚಾರ ಮಾಡದ ಕಾರಣ ಮಂಡಳಿಯು 2002ರ ಹಳೆಯ ಸಿಡಿಐ ಬಳಕೆಯನ್ನು ಮುಂದುವರೆಸಿತ್ತು ಎಂದು ತಿಳಿಸುವ ಮಂಡಳಿಯ ಉತ್ತರವನ್ನು (ಜುಲೈ 2022) ಸರ್ಕಾರವು ದೃಢೀಕರಿಸಿತು. ಮುಂದುವರೆದು, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳಿಗೆ, ಅವುಗಳ ವೇಗವಾಗಿ ಬೆಳೆಯುತ್ತಿರುವ ಸ್ಥಿತಿಯಿಂದಾಗಿ, ಬೇರೆ ಸಿಡಿಐಯನ್ನು ಅಳವಡಿಸಿಕೊಳ್ಳಲಾಯಿತು ಎಂದು ಸರ್ಕಾರವು ತಿಳಿಸಿತು (ಜುಲೈ 2022. ಆದರೂ, ಎರಡು ತಾಲೂಕುಗಳಿಗೆ ಮಾತ್ರ ಸೂಚ್ಯಂಕದ

[14] ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಸೂಚಕಗಳ ಆಧಾರದ ಮೇಲೆ ಡಾ.ನಂಜುಂಡಪ್ಪ ಸಮಿತಿ ಅಭಿವೃದ್ಧಿಪಡಿಸಿದ ಸಿಡಿಐ ಸೂಚ್ಯಂಕ

[15] ಕಲಬುರಗಿ ಮತ್ತು ರಾಯಚೂರು.

ಮಾರ್ಪಾಡು ಮಾಡಿರುವುದು ಇತರ ತಾಲೂಕುಗಳಿಗೆ ಹಂಚಿಕೆಯ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.

ಯೋಜನಾ ಇಲಾಖೆಯು ಡಾ.ನಂಜುಂಡಪ್ಪ ಸಮಿತಿಯ ಸೂಚಕಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸುತ್ತಿರುವುದನ್ನು ಮತ್ತು ಆ ಮೂಲಕ ಪ್ರತಿ ವರ್ಷ ಸಿಡಿಐಯನ್ನು ಲೆಕ್ಕ ಹಾಕಬಹುದು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಮಂಡಳಿಯು ತನ್ನ ಕಾರ್ಯಕ್ರಮಗಳ ಮೂಲಕ ಸಾಧಿಸಿದ ಸುಧಾರಣೆಗಳನ್ನು ನಿರ್ಧರಿಸಲಾಗಲಿಲ್ಲ ಮತ್ತು ಉದ್ದೇಶಿತ ಕಾರ್ಯಕ್ರಮಗಳಿಗಾಗಿ ಅಸ್ತಿತ್ವದಲ್ಲಿರುವ ವಂಚಿತ ಪ್ರದೇಶಗಳನ್ನು ನಿರ್ಧರಿಸಲು ಸಾಧ್ಯವಾಗಲಿಲ್ಲ. ಅಲ್ಲದೆ, ಎರಡು ತಾಲೂಕುಗಳಿಗೆ ಹೆಚ್ಚಿನ ಸಿಡಿಐ ಸೂಚ್ಯಂಕವನ್ನು ಅಳವಡಿಸಿಕೊಳ್ಳುವುದು ಇತರ ತಾಲೂಕುಗಳ ಹಂಚಿಕೆಯ ಮೇಲೆ ಪರಿಣಾಮ ಬೀರಿತ್ತು.

ಪ್ರಸ್ತುತ ದತ್ತಾಂಶವನ್ನು ಬಳಸಿಕೊಂಡು ಸೂಚಕ ಸ್ಕೋರ್‌ಗಳ ಆಧಾರದ ಮೇಲೆ ಮಂಡಳಿಯು ಕಾರ್ಯಕ್ರಮಗಳನ್ನು ಯೋಜಿಸುವ ಸಾಧ್ಯತೆಯನ್ನು ಅನ್ವೇಷಿಸಬಹುದು ಎಂಬುದು ಲೆಕ್ಕಪರಿಶೋಧನೆಯು ಅಭಿಪ್ರಾಯವಾಗಿದೆ, ಇದು ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ವಂಚಿತ ಪ್ರದೇಶಗಳು ಮತ್ತು ವಲಯಗಳನ್ನು ನಿರ್ಧರಿಸಲು ಸಹಾಯ ಮಾಡುತ್ತದೆ ಹಾಗೂ ಉದ್ದೇಶಿತ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಸಹಾಯ ಮಾಡುತ್ತದೆ.

### *3.6.2 ಹೊಸದಾಗಿ ರಚಿತವಾದ ತಾಲೂಕುಗಳಿಗೆ ಪ್ರತ್ಯೇಕವಾಗಿ ಹಣ ಹಂಚಿಕೆ ಮಾಡದಿರುವುದು*

2002ರಲ್ಲಿ ಡಾ.ನಂಜುಂಡಪ್ಪ ಸಮಿತಿ ವರದಿಯನ್ನು ಮಂಡಿಸಿದಾಗ ಕಲ್ಯಾಣ ಕರ್ನಾಟಕ ಪ್ರದೇಶವು 31 ತಾಲೂಕುಗಳನ್ನು ಒಳಗೊಂಡಿತ್ತು. ವರದಿಯು ಪ್ರದೇಶದಲ್ಲಿನ ಈ 31 ತಾಲೂಕುಗಳಿಗೆ ಸಂಬಂಧಿಸಿದಂತೆ ಮಾತ್ರ ಅಭಾವ ಸೂಚ್ಯಂಕವನ್ನು (ಸಿಡಿಐ ಮೌಲ್ಯಗಳು) ಒಳಗೊಂಡಿತ್ತು. ಕಾಲಕಾಲಕ್ಕೆ ಆಡಳಿತ ಪ್ರದೇಶಗಳ ಪುನರ್‌ರಚನೆಯ ಪರಿಣಾಮವಾಗಿ, ಮಾರ್ಚ್ 2022 ರಲ್ಲಿದ್ದಂತೆ ಪ್ರದೇಶದ ತಾಲೂಕುಗಳ ಸಂಖ್ಯೆ 50ಕ್ಕೆ ಏರಿತು. ಡಾ.ನಂಜುಂಡಪ್ಪ ಸಮಿತಿಯು ನಿರ್ಧರಿಸಿದ್ದ ಅಭಾವ ಸೂಚ್ಯಂಕವು ಹೊಸದಾಗಿ ರಚನೆಯಾದ ತಾಲೂಕುಗಳಿಗೆ ಲಭ್ಯವಿರಲಿಲ್ಲ.

ಸೂಚ್ಯಂಕಗಳು ಲಭ್ಯವಿಲ್ಲದ ಕಾರಣ ಮಂಡಳಿಯು ಹೊಸದಾಗಿ ರಚಿತವಾದ ತಾಲೂಕುಗಳಿಗೆ ಪ್ರತ್ಯೇಕವಾಗಿ ಹಣವನ್ನು ಮಂಜೂರು ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹಂಚಿಕೆ ಉದ್ದೇಶಕ್ಕಾಗಿ ಹೊಸ ತಾಲೂಕುಗಳನ್ನು ಹಳೆಯ ತಾಲೂಕುಗಳ ಭಾಗವಾಗಿ ಪರಿಗಣಿಸಲಾಗಿತ್ತು. ಆದರೂ, ಈ ರೀತಿಯ ವ್ಯವಸ್ಥೆಯು ಹೊಸದಾಗಿ ರಚನೆಯಾದ ತಾಲೂಕಿನ ತುಲನಾತ್ಮಕ ಹಿಂದುಳಿದಿರುವಿಕೆಯನ್ನು ಪರಿಗಣಿಸುವುದಿಲ್ಲ ಮತ್ತು ಕೆಳಗೆ ವಿವರಿಸಿದಂತೆ ಅರ್ಹ ಹೆಚ್ಚುವರಿ ಹಂಚಿಕೆಯಿಂದ ಅವುಗಳನ್ನು ವಂಚಿತವಾಗಿಸಿದ್ದವು:

**_ನಿದರ್ಶನ_**

*ಡಾ.ನಂಜುಂಡಪ್ಪ ಸಮಿತಿಯ 2002ರ ಸಿಡಿಐ ಪ್ರಕಾರ ಯಾದಗಿರಿ ತಾಲೂಕು ಅತ್ಯಂತ ಹಿಂದುಳಿದ ಪ್ರದೇಶವಾಗಿತ್ತು. ಈ ಸಿಡಿಐ ಆಧರಿಸಿ ಯಾದಗಿರಿ ತಾಲೂಕಿಗೆ ಮಂಡಳಿಯು ಹಣ ಮಂಜೂರು ಮಾಡಿತು. 2017–18ರಲ್ಲಿ ಗುರುಮಿಠ್‌ಕಲ್ ತಾಲೂಕನ್ನು ಯಾದಗಿರಿ ತಾಲೂಕಿನಿಂದ ಬೇರ್ಪಡಿಸಲಾಯಿತು. 2019–20ರ ಸಿಡಿಐ ಮೌಲ್ಯಗಳ ಆಧಾರದ ಮೇಲೆ ಯಾದಗಿರಿ ತಾಲೂಕು ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿದ ವರ್ಗದಲ್ಲಿತ್ತು ಮತ್ತು ಗುರುಮಿಠ್‌ಕಲ್ ಹೆಚ್ಚು ಹಿಂದುಳಿದ ವರ್ಗದ ಅಡಿಯಲ್ಲಿ ಬರುತ್ತದೆ. ಯಾದಗಿರಿ ತಾಲೂಕಿಗಿಂತ ಗುರುಮಿಠ್‌ಕಲ್‌ನ ಸಿಡಿಐ ಹೆಚ್ಚಾಗಿದ್ದು ಗುರುಮಿಠ್‌ಕಲ್ ತಾಲ್ಲೂಕು ಯಾದಗಿರಿ ತಾಲೂಕಿಗಿಂತ ಹೆಚ್ಚಿನ ಅನುದಾನ ಪಡೆಯಬೇಕಿತ್ತು. ಸಂಯೋಜಿತ ಯಾದಗಿರಿ ತಾಲೂಕಿಗೆ ಹಣ ಮಂಜೂರು ಮಾಡುವ ಮೂಲಕ ಗುರುಮಿಠ್‌ಕಲ್ ತಾಲೂಕು ತನ್ನ ಅಭಾವಕ್ಕೆ ಅನುಗುಣವಾಗಿ ಹಣ ಪಡೆಯುವ ಅವಕಾಶವನ್ನು ಕಳೆದುಕೊಂಡಿತು.*

ಹೊಸ ತಾಲ್ಲೂಕುಗಳಿಗೆ ಸಿಡಿಐಯನ್ನು ಮರುಲೆಕ್ಕಾಚಾರ ಮಾಡದ ಕಾರಣ ಮಂಡಳಿಯು ಹಳೆಯ ತಾಲ್ಲೂಕುಗಳ ಸಿಡಿಐ ಬಳಕೆಯನ್ನು ಮುಂದುವರೆಸಿತ್ತು ಎಂದು ಸರ್ಕಾರವು ತಿಳಿಸಿತು (ಜುಲೈ 2022). ಯೋಜನಾ ಇಲಾಖೆಯಲ್ಲಿ ಲಭ್ಯವಿರುವ ದತ್ತಾಂಶವನ್ನು ಬಳಸಿಕೊಂಡು ಮಂಡಳಿಯು ನಿಯತಕಾಲಿಕವಾಗಿ ಸಿಡಿಐಯನ್ನು ಮರು ಲೆಕ್ಕಾಚಾರ ಮಾಡಬೇಕಿತ್ತು ಮತ್ತು ಅದಕ್ಕನುಗುಣವಾಗಿ ಹಣವನ್ನು ಹಂಚಿಕೆ ಮಾಡಬೇಕಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *3.6.3 ಪ್ರಾದೇಶಿಕ ನಿಧಿಯಡಿಯಲ್ಲಿ ನಿಧಿಗಳ ಹಂಚಿಕೆ*

ಮಂಡಳಿಯು ಕಲ್ಯಾಣ–ಕರ್ನಾಟಕ ಪ್ರದೇಶದ ಬಹು ಜಿಲ್ಲೆಗಳಾದ್ಯಂತ ಪ್ರಭಾವ ಬೀರುವ ಪ್ರಮುಖ ಕಾರ್ಯಕ್ರಮಗಳಿಗೆ ಹಣಕಾಸು ಒದಗಿಸಲು ಪ್ರಾದೇಶಿಕ ನಿಧಿಯನ್ನು ಪರಿಚಯಿಸಿತು. ಮಂಡಳಿಯು 2019–20 ಮತ್ತು 2020–21ರ ಅವಧಿಯಲ್ಲಿ ತನ್ನ ನಿಧಿಯ ಶೇಕಡಾ ಆರರಷ್ಟನ್ನು ಪ್ರಾದೇಶಿಕ ನಿಧಿಗೆ ಮೀಸಲಿಟ್ಟಿದೆ.

₹217.15 ಕೋಟಿಗಳ ಒಟ್ಟು ನಿಧಿಯಲ್ಲಿ ₹68.10 ಕೋಟಿ ಮೊತ್ತವನ್ನು ಪ್ರಾದೇಶಿಕ ನಿಧಿಗೆ ಹಂಚಿಕೆ ಮಾಡಲಾಯಿತು ಮತ್ತು ಅದು ಇಡೀ ಪ್ರದೇಶದ ಮೇಲೆ ಪರಿಣಾಮ ಬೀರಬಹುದು ಮತ್ತು ಪ್ರಾದೇಶಿಕ ನಿಧಿಯಡಿಯಲ್ಲಿ ಒಟ್ಟು ಹಂಚಿಕೆಯ ಶೇಕಡ 31.36ರಷ್ಟಿತ್ತು. ಉಳಿದ ಹಣವನ್ನು ಪ್ರತ್ಯೇಕ ಜಿಲ್ಲೆಗಳ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ. ಜಿಲ್ಲೆಗಳಿಗೆ ಮೀಸಲಿಟ್ಟ ಹಣದಲ್ಲಿ ಹೆಚ್ಚಿನ ಹಣವನ್ನು ಕಲಬುರಗಿ ಜಿಲ್ಲೆಗೆ ಮಾತ್ರ ಹಂಚಿಕೆ ಮಾಡಲಾಗಿತ್ತು. ಪ್ರಾದೇಶಿಕ ಸ್ವರೂಪದ ಕಾಮಗಾರಿಗಳನ್ನು ಪ್ರಾದೇಶಿಕ ನಿಧಿಯಡಿಯಲ್ಲಿ ಕೈಗೆತ್ತಿಕೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು..

ಪ್ರಾದೇಶಿಕ ನಿಧಿಯಡಿ ಕೈಗೊಳ್ಳಬೇಕಾದ ಕಾಮಗಾರಿಗಳ ಆಯ್ಕೆಗೆ ಮಂಡಳಿಯು ಯಾವುದೇ ಮಾರ್ಗಸೂಚಿಗಳನ್ನು ನೀಡದಿರುವುದನ್ನೂ ಸಹ ಗಮನಿಸಲಾಯಿತು.

ಕಲಬುರಗಿಯು ಪ್ರಾದೇಶಿಕ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದರಿಂದ ಪ್ರಾದೇಶಿಕ ನಿಧಿಯಡಿಯಲ್ಲಿ ಹೆಚ್ಚಿನ ಕಾಮಗಾರಿಗಳನ್ನು ಕಲಬುರಗಿ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಜುಲೈ 2022). ಕಲಬುರಗಿ ಜಿಲ್ಲೆಯಲ್ಲಿಯೂ ಪ್ರಾದೇಶಿಕ ಸ್ವರೂಪವಲ್ಲದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದನ್ನು ಪರಿಗಣಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

### *3.6.4 ಅಧ್ಯಕ್ಷರ ವಿವೇಚನಾ ದೇಯಾಂಶದಡಿಯಲ್ಲಿ ನಿಧಿಗಳ ಹಂಚಿಕೆ*

ಮಂಡಳಿಯು ಪ್ರತಿ ವರ್ಷ ಶೇಕಡ ಒಂದರಷ್ಟು ಹಣವನ್ನು ಅಧ್ಯಕ್ಷರ ವಿವೇಚನಾ ದೇಯಾಂಶಕ್ಕೆ (ಸಿಡಿಕ್ಯೂ) ಮೀಸಲಿಟ್ಟಿದೆ. ಸಿಡಿಕ್ಯೂ ನಿಧಿಗಳ ಜಿಲ್ಲಾವಾರು ಹಂಚಿಕೆಯನ್ನು **ಕೋಷ್ಟಕ–3.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.3: ಸಿಡಿಕ್ಯೂ ಹಂಚಿಕೆ**

| ಜಿಲ್ಲೆ | ಕಾಮಗಾರಿಗಳ ಸಂಖ್ಯೆ | ಹಂಚಿಕೆ (ಕೋಟಿಯಲ್ಲಿ) | ಹಂಚಿಕೆಯ ಶೇಕಡಾವಾರು |
|---|---|---|---|
| ಬಳ್ಳಾರಿ | 2 | 0.98 | 0.84 |
| ಬೀದರ್ | 18 | 19.31 | 16.56 |
| ಕಲಬುರಗಿ | 174 | 86.27 | 73.97 |
| ಕೊಪ್ಪಳ | 6 | 7.20 | 6.17 |
| ರಾಯಚೂರು | 3 | 1.45 | 1.25 |
| ಯಾದಗಿರಿ | 4 | 1.42 | 1.21 |
| **ಒಟ್ಟು** | **207** | **116.63** | **100.00** |

ಆಧಾರ: ಕೆಕೆಆರ್‌ಡಿಬಿ ಒದಗಿಸಿದ ಹೈಕಾಸಾಫ್ಟ್ ದತ್ತಸಂಚಯ

ಸಿಡಿಕ್ಯೂ ಅಡಿಯಲ್ಲಿ ಶೇಕಡಾ 73.97ರಷ್ಟು ಹಣವನ್ನು ಕಲಬುರಗಿ ಜಿಲ್ಲೆಗೆ ಮಾತ್ರ ಮೀಸಲಿಟ್ಟಿರುವುದನ್ನು ಗಮನಿಸಲಾಯಿತು. ಅಂತಹ ಅಸಮತೋಲಿತ ಹಂಚಿಕೆಯು ಇತರ ಜಿಲ್ಲೆಗಳಿಗೆ ತಮ್ಮ ಪಾಲಿನ ಹಣವನ್ನು ವಂಚಿತಗೊಳಿಸಿತು.

ಕಲಬುರಗಿಯು ಪ್ರಾದೇಶಿಕ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದರಿಂದ ಸಿಡಿಕ್ಯೂ ಅಡಿಯಲ್ಲಿ ಹೆಚ್ಚಿನ ಕಾಮಗಾರಿಗಳನ್ನು ಕಲಬುರಗಿ ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ ಎಂದು ಸರ್ಕಾರವು ಉತ್ತರಿಸಿತು (ಜುಲೈ 2022). ಕಲಬುರಗಿ ಜಿಲ್ಲೆಯಲ್ಲಿ ಪ್ರಾದೇಶಿಕ ಸ್ವರೂಪವಲ್ಲದ ಕಾಮಗಾರಿಗಳನ್ನೂ ಕೈಗೆತ್ತಿಕೊಂಡಿರುವ ಅಂಶವನ್ನು ಪರಿಗಣಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.


### *3.6.5 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳಡಿಯಲ್ಲಿ ಹಣ ಹಂಚಿಕೆ*

ಕರ್ನಾಟಕ ಪರಿಶಿಷ್ಟ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ, ಹಣಕಾಸು ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಕಾಯಿದೆ 2013ರ ಅನುಚ್ಛೇದ 17ರ ಪ್ರಕಾರ, ಪ್ರತಿ ಇಲಾಖೆಯು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಯಲ್ಲಿನ ಅಂತರವನ್ನು ಅಂದಾಜು ಮಾಡಿದ ನಂತರ, ನಿಗದಿಪಡಿಸಿದಂತೆ ಸಮಾಲೋಚನಾ ಪ್ರಕ್ರಿಯೆಯ ಮೂಲಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಅಗತ್ಯತೆಗಳಿಗೆ ಆದ್ಯತೆ ನೀಡಿ ಪರಿಶಿಷ್ಟ ಜಾತಿಗಳ ಉಪ–ವಿನಿಯೋಗ/ ಬುಡಕಟ್ಟು ಉಪ–ವಿನಿಯೋಗ ಯೋಜನೆಗಳನ್ನು ರೂಪಿಸಬೇಕು. ಎಸ್‌ಸಿ/ಎಸ್‌ಟಿ ಯೋಜನೆಗಳ ಅಡಿಯಲ್ಲಿ ನಿಧಿಗಳ ಹಂಚಿಕೆಯು ಅಭಿವೃದ್ಧಿ ಅಂತರಗಳ ಯಾವುದೇ ಮೌಲ್ಯಮಾಪನ ಮತ್ತು ಸಮಾಲೋಚನಾ ಪ್ರಕ್ರಿಯೆಯ ಆಧಾರದ ಮೇಲೆ ರೂಪಿಸಲಾದ ಉದ್ದೇಶಿತ ಕಾರ್ಯಕ್ರಮಗಳನ್ನು ಆಧರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಜಿಲ್ಲೆಗಳಿಗೆ ಎಸ್‌ಸಿಎಸ್‌ಪಿ ನಿಧಿಗಳ ಮತ್ತು ಟಿಎಸ್‌ಪಿ ನಿಧಿಗಳ ಪಾಲು ಜನಸಂಖ್ಯೆಗೆ ಅನುಗುಣವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎರಡೂ ಉಪ ಯೋಜನೆಗಳಲ್ಲಿ ಕಲಬುರಗಿ ಜಿಲ್ಲೆಗೆ ಹೆಚ್ಚಿನ ಹಣ ಮಂಜೂರು ಮಾಡಲಾಗಿದ್ದು, ಬಳ್ಳಾರಿಗೆ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆಯಾಗಿರಲಿಲ್ಲ.

ಜನಸಂಖ್ಯೆಯ ಪಾಲಿಗೆ ಪ್ರತಿಯಾಗಿ ಹಂಚಿಕೆಯ ವಿವರಗಳನ್ನು ಕೆಳಗಿನ **ನಕ್ಷೆ–3.2** ಮತ್ತು **ನಕ್ಷೆ–3.3**ರಲ್ಲಿ ನೀಡಲಾಗಿದೆ:


**ನಕ್ಷೆ–3.2: ಎಸ್‌ಸಿಪಿ ಅಡಿಯಲ್ಲಿ ಜಿಲ್ಲಾವಾರು ನಿಧಿಗಳ ಹಂಚಿಕೆ**




| | ಬಳ್ಳಾರಿ | ಬೀದರ್ | ಕಲಬುರಗಿ | ಕೊಪ್ಪಳ | ರಾಯಚೂರು | ಯಾದಗಿರಿ |
|---|---|---|---|---|---|---|
| ಜನಸಂಖ್ಯಾ ಪಾಲು | 20.71 | 16. | 25.96 | 10.35 | 16.04 | 10.94 |
| 2018–19 | 14.09 | 14.2 | 36.67 | 10.39 | 13.17 | 11.49 |
| 2019–20 | 13.79 | 14.16 | 36.51 | 10.49 | 13.54 | 11.51 |
| 2020–21 | 13.79 | 14.16 | 36.51 | 10.49 | 13.54 | 11.51 |

ಆಧಾರ: ಕೆಕೆಆರ್‌ಡಿಬಿ ಒದಗಿಸಿದ ಹೈಕಾಸಾಫ್ಟ್ ದತ್ತಸಂಚಯ

**ನಕ್ಷೆ–3.3: ಗಿರಿಜನ ಉಪಯೋಜನೆ (ಟಿಎಸ್‌ಪಿ) ಅಡಿಯಲ್ಲಿ ಜಿಲ್ಲಾವಾರು ನಿಧಿಯ ಹಂಚಿಕೆ**




| | ಬಳ್ಳಾರಿ | ಬೀದರ್ | ಕಲಬುರಗಿ | ಕೊಪ್ಪಳ | ರಾಯಚೂರು | ಯಾದಗಿರಿ |
|---|---|---|---|---|---|---|
| ಜನಸಂಖ್ಯಾ ಪಾಲು | 31.55 | 16.48 | 4.56 | 11.48 | 25.66 | 10.26 |
| 2018–19 | 22.23 | 16.37 | 6.38 | 13.82 | 29.29 | 11.91 |
| 2019–20 | 23.04 | 16.53 | 6.46 | 13.62 | 28.44 | 11.91 |
| 2020–21 | 23.04 | 16.53 | 6.46 | 13.62 | 28.44 | 11.91 |



ಆಧಾರ: ಕೆಕೆಆರ್‌ಡಿಬಿ ಒದಗಿಸಿದ ಹೈಕಾಸಾಫ್ಟ್ ದತ್ತಸಂಚಯ

## 3.7 ಸಮುದಾಯ ಸಜ್ಜುಗೊಳಿಸುವಿಕೆ

ಸಮುದಾಯ ಸಜ್ಜುಗೊಳಿಸುವಿಕೆ ಮತ್ತು ಅನುಷ್ಠಾನದಲ್ಲಿ ಸಮುದಾಯದ ಸದಸ್ಯರ ಪಾಲ್ಗೊಳ್ಳುವಿಕೆಯು ಅತ್ಯಂತ ನಿರ್ಣಾಯಕವಾಗಿದೆ ಏಕೆಂದರೆ ಇದು ಪರಿಣಾಮಕಾರಿ ಯೋಜನೆ ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಮಾತ್ರವಲ್ಲದೆ ಸಮುದಾಯದಿಂದ ಮಂಡಳಿಯ ಕಾರ್ಯಕ್ರಮಗಳ ಪರಿಣಾಮಕಾರಿ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಮಾಲೀಕತ್ವದಲ್ಲಿ 'ತಳಮಟ್ಟದ ವಿಧಾನವನ್ನು' ಅನುಸರಿಸಿದಂತಾಗುತ್ತದೆ. ಸಮುದಾಯದ ಸಕ್ರಿಯ ಭಾಗವಹಿಸುವಿಕೆಯು ಪಾರದರ್ಶಕತೆ, ಹೊಣೆಗಾರಿಕೆಯನ್ನು ಖಚಿತಪಡಿಸುತ್ತದೆ ಮತ್ತು ಉತ್ತಮ ಕಾರ್ಯನಿರ್ವಹಣೆಗಾಗಿ ಸಮುದಾಯದ ಸಂಚಿತ ಜ್ಞಾನವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ.

ಆದರೆ, ಯೋಜನಾ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಕಾರ್ಯವಿಧಾನವನ್ನು ಮಂಡಳಿಯು ಅನುಸರಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಯೋಜನೆಯಲ್ಲಿ ಮಂಡಳಿಯು ತಳಮಟ್ಟದ ವಿಧಾನವನ್ನು ಅಳವಡಿಸಿಕೊಂಡಿರಲಿಲ್ಲ. ಪ್ರತಿ ವರ್ಷ ತನ್ನ ಕಾರ್ಯ ಯೋಜನೆಯನ್ನು ಅಂತಿಮಗೊಳಿಸುವ ಮೊದಲು ಜಿಲ್ಲಾ ಮಟ್ಟದ/ತಾಲೂಕು ಮಟ್ಟದ/ವಾಸ ಮಟ್ಟದ ಯೋಜನೆಗಳನ್ನು ಪಡೆದಿರಲಿಲ್ಲ.

ಪ್ರದೇಶದಲ್ಲಿರುವ ತಾಲೂಕು ಮಟ್ಟದ ಪ್ರಸ್ತಾವನೆಗಳು ಪ್ರತ್ಯೇಕ ಜಿಲ್ಲೆಗಳು/ತಾಲೂಕುಗಳಿಗೆ ಸೇರಿದ ವಿವಿಧ ಸಮುದಾಯಗಳ ದೃಷ್ಟಿಕೋನಗಳು, ಆಕಾಂಕ್ಷೆಗಳು ಮತ್ತು ಅಗತ್ಯತೆಗಳಿಗೆ ಕಾರಣವೆಂದು ಸರ್ಕಾರವು ತಿಳಿಸಿತು (ಜುಲೈ 2022). ಆದರೂ, ತಾಲೂಕು ಮತ್ತು ಜಿಲ್ಲಾ ಮಟ್ಟದ ಯೋಜನೆಗಳ ತಯಾರಿಕೆಯಲ್ಲಿ ಸಮುದಾಯದ ಸದಸ್ಯರು ಮತ್ತು ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆಗೆ ಸಂಬಂಧಿಸಿದ ವಿವರಗಳನ್ನು ಸಲ್ಲಿಸಲಿಲ್ಲ.

***ಶಿಫಾರಸು–1:* *ಮಂಡಳಿಯು ಪ್ರದೇಶದ ಹಿಂದುಳಿದಿರುವಿಕೆಯ ಸ್ವತಂತ್ರ ಮೌಲ್ಯಮಾಪನವನ್ನು ಕೈಗೊಳ್ಳಬೇಕು, ಅಸಮತೋಲನಗಳು ಮತ್ತು ಅದರ ಕಾರಣಗಳನ್ನು ಗುರುತಿಸಲು ತುಲನಾತ್ಮಕ ವಿಶ್ಲೇಷಣೆಯನ್ನು ಕೈಗೊಳ್ಳಬೇಕು ಮತ್ತು ಸೂಕ್ತವಾದ ಸಂಯೋಜಿತ ಸೂಚಕ ಚೌಕಟ್ಟನ್ನು ಅಳವಡಿಸಿಕೊಳ್ಳುವ***

*ಮೂಲಕ ಅಗತ್ಯವಿರುವ ಪರಿಹಾರ ಕ್ರಮಗಳು ಮತ್ತು ಕಾರ್ಯತಂತ್ರಗಳನ್ನು ಪ್ರಸ್ತಾಪವಿಸಬೇಕು ಹಾಗೂ ಪ್ರದೇಶದ ಉನ್ನತಿಯಲ್ಲಿನ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಅವುಗಳನ್ನು ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳಾಗಿ ಸಂಯೋಜಿಸಬೇಕು.*

*ಶಿಫಾರಸು–2: ಮಂಡಳಿಯು 2013ರ ಮಂಡಳಿಯ ಆದೇಶದ ಷರತ್ತು 12ರಡಿಯಲ್ಲಿ ಪ್ರದೇಶಕ್ಕೆ ಅಗತ್ಯವಿರುವ ಅಭಿವೃದ್ಧಿ ವೆಚ್ಚದ ಮಟ್ಟವನ್ನು ಸೂಚಿಸಲು, ಕೈಗಾರಿಕಾ ಅಭಿವೃದ್ಧಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ನೀತಿ ಒಳಹರಿವುಗಳನ್ನು ಒದಗಿಸಲು ಮತ್ತು ಸಂಸ್ಥೆಗಳ ಮಂಜೂರಾತಿಗೆ ಸಲಹೆ ನೀಡುವ ಮೂಲಕ ವಿವಿಧ ವಲಯಗಳಲ್ಲಿನ ಅಭಿವೃದ್ಧಿಯ ಸಂಬಂಧಿತ ಮಟ್ಟವನ್ನು ಖಚಿತಪಡಿಸಿಕೊಳ್ಳಲು ತನ್ನ ಕಾರ್ಯಗಳನ್ನು ನಿರ್ವಹಿಸಬೇಕು.*